ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜುಲೈ 2026 | ಬೆಲೆ ರೂ.1



## ಅನಂತದಲ್ಲಿ ಲೀನವಾದ ಗಾನಕೋಗಿಲೆ

1938–2026

**ಅಭಿನಂದನೆ**

# 14ನೇ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ರೇಣುಕುಮಾರ್ ಆರ್. ಅವರಿಗೆ ಸನ್ಮಾನ



ಬೆಂಗಳೂರಿನಲ್ಲಿ ದಿನಾಂಕ 07.07.2026 ರಂದು ನಡೆದ 14ನೇ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಆರ್. ಅವರನ್ನು ಶಾಲು ಹೊದಿಸಿ, ಸ್ಮರಣಿಕೆ ನೀಡಿ ಆತ್ಮೀಯವಾಗಿ ಅಭಿನಂದಿಸಲಾಯಿತು.

ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಯ ಬೆಳವಣಿಗೆಗೆ ಅವರು ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಈ ಗೌರವವನ್ನು ಪ್ರದಾನಿಸಲಾಯಿತು. ಸಮ್ಮೇಳನದಲ್ಲಿ ವಿವಿಧ ಕ್ಷೇತ್ರಗಳ ಗಣ್ಯರು, ಸಾಹಿತ್ಯಾಸಕ್ತರು, ಶರಣ ಸಾಹಿತ್ಯದ ಅಭಿಮಾನಿಗಳು ಹಾಗೂ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದು, ಸನ್ಮಾನ ಸ್ವೀಕರಿಸಿದ ರೇಣುಕುಮಾರ್ ಅವರಿಗೆ ಅಭಿನಂದನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಗಣ್ಯರು, ಕನ್ನಡ ಅಭ್ಯುದಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ವಿಸ್ತರಣೆಯಲ್ಲಿ ದೆಹಲಿ ಕರ್ನಾಟಕ ಸಂಘದ ಪಾತ್ರ ಮಹತ್ವದ್ದಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ❑

ದಿ ಸ್ಪಾರ್ಕ್ ಕಲೆಕ್ಟಿವ್ ಕಂಪನಿ ಅವರು ದಿನಾಂಕ : 11.07.2026 ರಂದು ಸಂಘದ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾಜಿ ಕೇಂದ್ರ ಸಚಿವೆ ಶ್ರೀಮತಿ ಸ್ಮೃತಿ ಇರಾನಿ ಅವರನ್ನು ಸಂಘದ ಅಧ್ಯಕ್ಷ ಶ್ರೀ ರೇಣುಕುಮಾರ್ ಆರ್., ಮತ್ತು ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್. ಅವರು ಸಂಘದ ಪರವಾಗಿ ಅಭಿನಂದಿಸುತ್ತಿರುವುದು ❑



## ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ರಾಧಾಕೃಷ್ಣ ಅವರಿಗೆ ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ



ಕರ್ನಾಟಕದ ಹಿರಿಯ ಸಾಂಸ್ಕೃತಿಕ ಸಂಘಟನೆಗಳಲ್ಲಿ ಒಂದಾದ ವಿ.ಕೆ.ಎಂ. ಕಲಾವಿದರು (ರಿ), ಬೆಂಗಳೂರು ಸಂಸ್ಥೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಬಾಬು ಜಗಜೀವನ ರಾಮ್ ಸ್ಮಾರಕ ನಾಟಕೋತ್ಸವ, ಸಾಂಸ್ಕೃತಿಕ ಕಲಾ ಮೇಳ–ರಂಗೋತ್ಸವ ಕಾರ್ಯಕ್ರಮವನ್ನು 2026ರ ಜೂನ್ 8 ರಿಂದ 10ರವರೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಅವರಿಗೆ ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಾಮಾಜಿಕ ಹಾಗೂ ಸಂಘಟನಾ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಇವರು ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಹಲವಾರು ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಇವರ ಸಮಾಜಮುಖಿ ಸೇವೆ, ಸಂಘಟನಾ ಕೌಶಲ್ಯ ಹಾಗೂ ಕನ್ನಡ ನಾಡು–ನುಡಿಯ ಮೇಲಿನ ಅಪಾರ ಪ್ರೀತಿಯನ್ನು ಗುರುತಿಸಿ ನೀಡಲಾಗುತ್ತಿರುವ ಈ ಪ್ರತಿಷ್ಠಿತ ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ. ಶ್ರೀ ರಾಧಾಕೃಷ್ಣ ಅವರಿಗೆ ಈ ಗೌರವ ದೊರೆತಿರುವ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು, ಸದಸ್ಯರು ಹಾಗೂ ಸಮಸ್ತ ದೆಹಲಿ ಕನ್ನಡಿಗರು ಹರ್ಷ ವ್ಯಕ್ತಪಡಿಸಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ❑

ಸಂಪುಟ 36 । ಸಂಚಿಕೆ 10
ಜುಲೈ–2026

ದೆಹಲಿ ಕರ್ನಾಟಕ ಸಂಘದ
**ಅಭಿಮತ**

ಪ್ರಧಾನ ಸಂಪಾದಕರು
ರೇಣುಕಾ ನಿಡಗುಂದಿ

ಸಂಪಾದಕ ಮಂಡಳಿ
ಚಂದ್ರಶೇಖರ ಎನ್.ಪಿ.
ಸಂತೋಷ್ ಕುಮಾರ್ ಉಪಾಧ್ಯಾಯ
ಪ್ರಕಾಶ್ ಶೆಟ್ಟಿ ಉಳೆಪಾಡಿ
ಹರಿಪ್ರಿಯ ಎಸ್.
ಪ್ರಸಾದ್ ನಾಯ್ಕ್
ನಟರಾಜ್ ಸಿ.

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ–2026–28

ಅಧ್ಯಕ್ಷರು
ರೇಣುಕುಮಾರ್ ಆರ್.
9868393953
ಉಪಾಧ್ಯಕ್ಷರು
ವಸಂತ ಶೆಟ್ಟಿ ಬೆಳ್ಳಾರೆ
9958697823
ಶೋಭಾ ಗೌಡ
8800588150
ಪ್ರಧಾನ ಕಾರ್ಯದರ್ಶಿ
ರಾಧಾಕೃಷ್ಣ
9818252183
ಖಜಾಂಚಿ
ಆಶಾಲತಾ ಎಂ.
9891249149
ಜಂಟಿ ಕಾರ್ಯದರ್ಶಿಗಳು
ಸಂತೋಷ ಜಿ.
9911235783
ಅಶ್ವಿನಿ ಬಿ.ಎಸ್.
9036235665
ಸಮಿತಿ ಸದಸ್ಯರು
ಪೂಜಾ ಪಿ. ರಾವ್
9810882498
ಶಿವಪ್ಪ ಎಂ.
9868159328
ಡಾ. ವೆಂಕಟಾಚಲ ಜಿ. ಹೆಗಡೆ
9312712476
ಡಾ. ಎಂ.ಎಸ್. ಶಶಿ ಕುಮಾರ್
9811689327
ನಾರಾಯಣ ಬಿ.
9868393978
ಕೃಷ್ಣಪ್ಪ ಎಂ.
9911156695
ಜಯಶ್ರೀ ಬಸವರಾಜು ಬಿ.ಕೆ.
9560760341
ಶುಭಾ ದೇವಿಪ್ರಸಾದ್
9319762969
ಆರ್. ಹರಿಕೃಷ್ಣ
9971518457
ರಾಜಕುಮಾರ್
9911150475

## ಸಂಪಾದಕೀಯ...

ಉತ್ತರ ಭಾರತಕ್ಕೆ ಮುಂಗಾರು ಕಾಲಿಟ್ಟಿದೆ. ಮಳೆ ನಗರದ ಕೊಳೆ ತೊಳೆದು ಎಲ್ಲೆಲ್ಲೂ ಹಸಿರು ನಳನಳಿಸುತ್ತಿದೆ. ಆದರೆ ಈ ವರ್ಷದ ಜುಲೈ ನಮ್ಮ ನೆನಪಿನಲ್ಲಿ ಉಳಿಯುವುದು ಪ್ರಕೃತಿಯ ಸೊಬಗಿನಿಂದಲ್ಲ; ಮನುಷ್ಯನ ಕ್ರೌರ್ಯದಿಂದ. ರಾಜಸ್ಥಾನ, ಪಶ್ಚಿಮ ಬಂಗಾಳದಲ್ಲಿ ಅಪ್ರಾಪ್ತೆಯರ ಮೇಲೆ ನಡೆದ ಸಾಮೂಹಿಕ ಬಲಾತ್ಕಾರ ಮತ್ತೊಮ್ಮೆ ದೇಶವನ್ನು ನಡುಗಿಸಿದೆ. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧ, ಇವೆಲ್ಲವೂ ಸೇರಿ ನಾಗರಿಕತೆಯ ಮನಸಾಕ್ಷಿಯನ್ನೇ ಪ್ರಶ್ನಿಸಿವೆ.

ರಾಜಸ್ಥಾನದ ಗಂಗಾನಗರದಲ್ಲಿ ಬಾಲಕಿಯನ್ನು ಅಪಹರಿಸಿ ಐದು ದಿನಗಳ ಕಾಲ ಮೂವತ್ತು ಜನ ದುರುಳರು ಸಾಮೂಹಿಕ ಅತ್ಯಾಚಾರ ನಡಿಸಿದ್ದರು. ಆ ಮಗು ಯಾತನೆಯಲ್ಲಿ ನರಳಿ ಪ್ರಾಣಬಿಟ್ಟಿತು. ಪಶ್ಚಿಮ ಬಂಗಾಳದಲ್ಲಿಯೂ ಅಪ್ರಾಪ್ತೆಯ ಮೇಲಿನ ಲೈಂಗಿಕ ದೌರ್ಜನ್ಯ ನಡೆದಿದೆ. ಈ ಪ್ರಕರಣಗಳು ಒಂದೇ ಸತ್ಯವನ್ನು ನೆನಪಿಸುತ್ತವೆ. ಅತ್ಯಾಚಾರಕ್ಕೆ ಧರ್ಮವಿಲ್ಲ, ಜಾತಿಯಿಲ್ಲ, ಪಕ್ಷವಿಲ್ಲ. ಆದರೆ ಸಮಾಜದ ಪ್ರತಿಕ್ರಿಯೆ ಮಾತ್ರ ನಿರಾಶಾದಾಯಕ.

ಏಕೆಂದರೆ, ಸಂಸ್ಕಾರ–ಸಂಸ್ಕೃತಿಯ ಜಪ ಮಾಡುವ ನಮ್ಮ ದೇಶದಲ್ಲಿ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯಗಳು ಮಿತಿಮೀರುತ್ತಿರುವುದು ತಲೆತಗ್ಗಿಸುವ ಸಂಗತಿ. ಈ ಪ್ರಕರಣಗಳು ದೇಶದ ಕಾನೂನು ಸುವ್ಯವಸ್ಥೆ ಹಾಗೂ ನಾಗರಿಕ ಸಮಾಜದ ಆತ್ಮಸಾಕ್ಷಿಯನ್ನು ಅಲುಗಾಡಿಸಿವೆ. ಹೆಣ್ಣುಮಕ್ಕಳ ರಕ್ಷಣೆ ಕೇವಲ "ಬೇಟಿ ಬಚಾವೋ ಬೇಟಿ ಪಢಾವೋ" ಘೋಷಣೆಗಷ್ಟೇ ಸೀಮಿತವಾಗುತ್ತಿದೆಯೇ ಎಂಬ ಆತಂಕ ಸೃಷ್ಟಿಯಾಗಿದೆ. ಇದರ ಜೊತೆಗೆ, ದೇಶದ ಮೂಲ ನಿವಾಸಿಗಳಾದ ಮಧ್ಯಪ್ರದೇಶದ ಆದಿವಾಸಿಗಳ ಪ್ರತಿಭಟನೆ ಜಲ, ಜಮೀನು ಮತ್ತು ಜಂಗಲ್ ಮೇಲಿನ ಅವರ ಹಕ್ಕುಗಳ ಹೋರಾಟವನ್ನು ತೀವ್ರಗೊಳಿಸಿದೆ. ಅಭಿವೃದ್ಧಿಯ ಹೆಸರಿನಲ್ಲಿ ತಳಸಮುದಾಯಗಳನ್ನು ಮೂಲೆಗುಂಪು ಮಾಡುತ್ತಿರುವುದರ ವಿರುದ್ಧದ ಆಕ್ರೋಶವಿದು.

ಈ ಆತಂಕ ಮತ್ತು ಭರವಸೆಗಳ ನಡುವೆಯೇ, ಸಾಂಸ್ಕೃತಿಕ ಲೋಕದ ಧ್ರುವತಾರೆ, ಗಾನಸರಸ್ವತಿ ಎಸ್. ಜಾನಕಿ ಅವರ ನಿಧನವು ಭಾರತೀಯ ಸಂಗೀತ ಲೋಕಕ್ಕೆ ತುಂಬಲಾರದ ನಷ್ಟವನ್ನು ಉಂಟುಮಾಡಿದೆ. ದಶಕಗಳ ಕಾಲ ತಮ್ಮ ಮಧುರ ಧ್ವನಿಯ ಮೂಲಕ ಕೋಟ್ಯಂತರ ಹೃದಯಗಳನ್ನು ತಣಿಸಿದ ಆ ಧ್ವನಿ ಮೌನವಾಗಿದೆ. ಕಲೆ ಮತ್ತು ಸಂಸ್ಕೃತಿ ಹೇಗೆ ಮನುಷ್ಯನ ಮನಸ್ಸನ್ನು ಸಂಸ್ಕರಿಸುತ್ತದೆ ಎಂಬುದಕ್ಕೆ ಜಾನಕಮ್ಮನವರ ಹಾಡುಗಳೇ ಸಾಕ್ಷಿ. ಇಂತಹ ಶ್ರೇಷ್ಠ ಚೇತನವನ್ನು ಕಳೆದುಕೊಂಡ ಬೆನ್ನಲ್ಲೇ, ನಮಗೆ ನೆನಪಾಗುವುದು ವಚನ ಸಾಹಿತ್ಯದ ಉದ್ಧಾರಕ, ವಚನ ಪಿತಾಮಹ ಫ.ಗು. ಹಳಕಟ್ಟಿ ಅವರ ಬದುಕು. ತಮಗಿದ್ದ ಆಸ್ತಿ–ಅಂತಸ್ತುಗಳನ್ನೆಲ್ಲ ಲೆಕ್ಕಿಸದೆ, ಕಣ್ಮರೆಯಾಗುತ್ತಿದ್ದ ಶರಣರ ವಚನ ಸಾಹಿತ್ಯದ ಭವ್ಯ ಪರಂಪರೆಯನ್ನು ಉಳಿಸಲು ತಮ್ಮ ಇಡೀ ಜೀವನವನ್ನೇ ಧಾರೆ ಎರೆದ ಹಳಕಟ್ಟಿಯವರ ತ್ಯಾಗದ ಬದುಕು, ಇಂದಿನ ಸ್ವಾರ್ಥಪರ ಸಮಾಜಕ್ಕೆ ಮೌಲ್ಯಾಧಾರಿತ ಜೀವನದ ಮಹತ್ವವನ್ನು ನೆನಪಿಸುತ್ತದೆ. ಇತಿಹಾಸದ ಇಂತಹ ಮಹಾತ್ಮರು ನಮಗೆ ಕಲಿಸಿದ ಸೌಹಾರ್ದತೆ, ತಾಳ್ಮೆ ಮತ್ತು ಮಾನವೀಯತೆಯ ಪಾಠಗಳು ಇಂದಿನ ವಾಸ್ತವದಲ್ಲಿ ಎಲ್ಲಿ ಕಳೆದುಹೋಗುತ್ತಿವೆ ಎಂಬ ಪ್ರಶ್ನೆ ಕಾಡದಿರದು.

ಜಾಗತಿಕವಾಗಿ ಇಂದು ಆತಂಕದ ನೆರಳು ಆವರಿಸಿದೆ. ಇರಾನ್ ಸಂಘರ್ಷದ ಕಿಡಿ ಇಡೀ ಜಗತ್ತನ್ನು ಮೂರನೇ ಮಹಾಯುದ್ಧದ ಅಂಚಿಗೆ ತಂದು ನಿಲ್ಲಿಸಿದೆ. ಈ ಯುದ್ಧವು ಕೇವಲ ಒಂದು ಭಾಗದ ಸಂಘರ್ಷವಲ್ಲ; ಇದು ಜಾಗತಿಕ ಆರ್ಥಿಕತೆ, ಕಚ್ಚಾ ತೈಲದ ಬೆಲೆ ಏರಿಕೆ ಹಾಗೂ ಲಕ್ಷಾಂತರ ಅಮಾಯಕರ ಜೀವಗಳ ಬಲಿಪೀಠವಾಗಿದೆ. ಯುದ್ಧದ ಉನ್ಮಾದದಲ್ಲಿರುವ ಜಗತ್ತಿಗೆ ಶಾಂತಿ ಮತ್ತು ಸಹನೆಯ ಪಾಠ ಅತ್ಯಗತ್ಯವಾಗಿದೆ.

ಇತ್ತ ಜಾಗತಿಕ ಸಂಕಷ್ಟದ ನಡುವೆಯೇ, ದೇಶದ ಒಳಗೆ ಯುವ ಸಮುದಾಯದ ಆಕ್ರೋಶ ಧಗಧಗಿಸುತ್ತಿದೆ. ನೀಟ್ (NEET) ಪರೀಕ್ಷೆಯ ಬೃಹತ್ ಅಕ್ರಮವನ್ನು ಪ್ರಶ್ನಿಸಿ, ತಮ್ಮ ಭವಿಷ್ಯಕ್ಕಾಗಿ ಬೀದಿಗಿಳಿದು ಆಂದೋಲನ ನಡೆಸುತ್ತಿರುವ ಯುವಕರ ಮೇಲೆ ನಡೆದ ಲಾಠಿ ಪ್ರಹಾರ ಹಾಗೂ ದಬ್ಬಾಳಿಕೆ ಆಡಳಿತ ವ್ಯವಸ್ಥೆಯ ಕ್ರೂರ ಮುಖವನ್ನು ಅನಾವರಣಗೊಳಿಸಿದೆ. ದೇಶವನ್ನು ಕಟ್ಟಬೇಕಾದ ತರುಣರ ಧ್ವನಿಯನ್ನು ಲಾಠಿಯ ಬಲದಿಂದ ಹತೋಟಿ ಮಾಡಲು ಹೊರಟಿರುವುದು ಪ್ರಜಾಪ್ರಭುತ್ವಕ್ಕೆ ಬಿದ್ದ ಪೆಟ್ಟು.

ಒಂದು ರಾಷ್ಟ್ರದ ಭವಿಷ್ಯ ಅದರ ಯುವಜನತೆಯ ಕನಸುಗಳ ಮೇಲೆ ನಿಂತಿರುತ್ತದೆ. ಪ್ರತಿಭಟನೆ ಎಂದರೆ ದೇಶದ್ರೋಹವಲ್ಲ. ಶಾಂತಿಯುತ ಪ್ರತಿಭಟನೆ ಭಾರತದ ಸಂವಿಧಾನ ನಾಗರಿಕರಿಗೆ ನೀಡಿರುವ ಪ್ರಜಾಸತ್ತಾತ್ಮಕ ಹಕ್ಕು.

ಸಂತಸದ ಸಂಗತಿ ಎಂದರೆ ಉತ್ತರ ಪ್ರದೇಶದ ಪ್ರಾಚೀನ ಬೌದ್ಧ ತಾಣವಾದ ಸಾರನಾಥಕ್ಕೆ ಯುನೆಸ್ಕೋ ವಿಶ್ವ ಪರಂಪರೆಯ ಮಾನ್ಯತೆ ಸಿಕ್ಕಿದೆ. ಇದು ಭಾರತದ 45ನೇ ಮತ್ತು ಉತ್ತರ ಪ್ರದೇಶದ 4ನೇ ವಿಶ್ವ ಪರಂಪರೆಯ ತಾಣವಾಗಿದೆ. ಬುದ್ಧನ ಕರುಣೆ, ಶಾಂತಿ ಮತ್ತು ಸೌಹಾರ್ದತೆಯ ಸಂದೇಶಗಳು ಜಗತ್ತಿಗೆ ಸದಾ ಪ್ರೇರಣಾದಾಯಕವಾಗಿವೆ. ಒಂದು ರಾಷ್ಟ್ರದ ಶಕ್ತಿಯನ್ನು ಅದರ ಕ್ಷಿಪಣಿಗಳು ಅಳೆಯುವುದಿಲ್ಲ; ಅದರ ನ್ಯಾಯ ಮತ್ತು ಕರುಣೆ ಅಳೆಯುತ್ತವೆ. ಪ್ರಜಾಪ್ರಭುತ್ವದ ಆರೋಗ್ಯವನ್ನು ಚುನಾವಣೆಗಳು ಮಾತ್ರವಲ್ಲ; ದುರ್ಬಲರ ಪರವಾಗಿ ಅದು ಎಷ್ಟು ಮಾನವೀಯವಾಗಿ ವರ್ತಿಸುತ್ತದೆ ಎಂಬುದು ಅಳೆಯುತ್ತದೆ. ಕೊನೆಯದಾಗಿ ನಮ್ಮ ವ್ಯಕ್ತಿತ್ವವನ್ನು ರೂಪಿಸಿದ ಬಾಲ್ಯದ ಶಿಕ್ಷಕರು, ಹಿತೈಷಿಗಳು ಹಾಗೂ ನಮ್ಮ ತಪ್ಪುಗಳನ್ನು ತಿದ್ದಿ ಸರಿಯಾದ ದಾರಿ ತೋರಿಸಿದ ಪ್ರತಿಯೊಬ್ಬ ಗುರುವಿಗೂ ಗುರುಪೂರ್ಣಿಮೆಯ ವಂದನೆಗಳು. ❑

*ರೇಣುಕಾ ನಿಡಗುಂದಿ*

ಕಾವಲು ಸಮಿತಿ | ಶ್ರೀ ಎನ್.ಎ. ಮಾಧವ | ಶ್ರೀ ಎಂ.ವಿ. ವೆಂಕಟೇಶ್ | ಶ್ರೀಮತಿ ರಾಧಾ ಕೌಜಲಗಿ

## ನಾವು–ನೀವು

ಪ್ರಿಯ ಓದುಗರೇ, ಕನ್ನಡಾಭಿಮಾನಿಗಳೇ,

ನಮ್ಮ ಸಂಘದ ಚಟುವಟಿಕೆಗಳು ನಿರಂತರವಾಗಿ ಹೊಸ ಹೆಜ್ಜೆಗಳನ್ನು ಇಡುತ್ತಿರುವುದು ಅತ್ಯಂತ ಸಂತಸದ ಸಂಗತಿ. ಸಾಹಿತ್ಯ, ಸಂಸ್ಕೃತಿ ಮತ್ತು ಕಲೆಯ ಬೆಳವಣಿಗೆಗಾಗಿ ನಮ್ಮ ಸಂಘ ಕೈಗೊಂಡಿರುವ ವಿವಿಧ ಕಾರ್ಯಕ್ರಮಗಳಿಗೆ ಸದಸ್ಯರಿಂದ ದೊರೆಯುತ್ತಿರುವ ಬೆಂಬಲ ನಮ್ಮ ಕಾರ್ಯಕ್ಕೆ ಹೊಸ ಉತ್ಸಾಹ ತುಂಬಿದೆ.

ಇತ್ತೀಚೆಗೆ ಕನ್ನಡದ ಹೆಮ್ಮೆಯ ಯಕ್ಷಗಾನ ಕಲಾವಿದ ಕೆರೆಮನೆ ಡಾ. ಶಿವಾನಂದ ಹೆಗಡೆ ಅವರಿಗೆ ಸಂಘವು ಕಲಾವಿದರಿಗೆ ನೀಡುವ ಪ್ರತಿಷ್ಠಿತ ಡಾ. ಶಿವರಾಮ ಕಾರಂತ ಪ್ರಶಸ್ತಿ ನೀಡಿ ಗೌರವಿಸಿರುವುದು ಕನ್ನಡದ ಸಾಂಸ್ಕೃತಿಕ ಲೋಕಕ್ಕೆ ಸಂದ ಅಪೂರ್ವ ಗೌರವವಾಗಿದೆ. ಇದಲ್ಲದೆ 2024–25 ರ ಸಾಲಿನ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ರಾಷ್ಟ್ರಮಟ್ಟದ ಪ್ರಶಸ್ತಿಯೂ ಲಭಿಸಿದ್ದು ಕನ್ನಡಿಗರಿಗೆ ಹೆಮ್ಮೆಯ ಕ್ಷಣ. ಅವರ ಈ ಮಹತ್ತರ ಸಾಧನೆಗೆ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಭಾಷೆಯ ಉಳಿವು ಮತ್ತು ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ಸಂಘದಲ್ಲಿ ಕನ್ನಡ ಕಲಿಕಾ ತರಗತಿಗಳನ್ನು ಆರಂಭಿಸಲಾಗಿದೆ. ಕನ್ನಡೇತರರಿಗೆ ಕನ್ನಡ ಕಲಿಸುವ ಈ ಪ್ರಯತ್ನಕ್ಕೆ ಉತ್ತಮ ಸ್ಪಂದನೆ ದೊರೆಯುತ್ತಿರುವುದು ಸಂತಸದ ಸಂಗತಿ. ಇದೇ ರೀತಿ ಭಾರತೀಯ ಶಾಸ್ತ್ರೀಯ ನೃತ್ಯದ ಶ್ರೀಮಂತ ಪರಂಪರೆಯನ್ನು ಪರಿಚಯಿಸುವ ಉದ್ದೇಶದಿಂದ ಕಥಕ್ ತರಬೇತಿ ತರಗತಿಗಳಿಗೂ ಚಾಲನೆ ನೀಡಲಾಗಿದೆ. ಇವು ನಮ್ಮ ಸಂಘದ ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮವನ್ನು ನೀಡಲಿವೆ.

ಆಗಸ್ಟ್ ತಿಂಗಳಲ್ಲಿ ನಮ್ಮ ಸಂಘದ ಆಶ್ರಯದಲ್ಲಿ ಖ್ಯಾತ ನಟ ಶ್ರೀನಾಥ್ ಅವರ ವಿಶೇಷ ಆಗಮನದೊಂದಿಗೆ "ಆಕಾಶ ದೀಪವು ನೀನು" ಚಲನಚಿತ್ರ ಗೀತೆಗಳ ಮತ್ತು ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಈ ಕಾರ್ಯಕ್ರಮವು ಕನ್ನಡ ಚಿತ್ರರಂಗದ ಸುವರ್ಣ ನೆನಪುಗಳನ್ನು ಮೆಲುಕು ಹಾಕುವ ಜೊತೆಗೆ ಸದಸ್ಯರಿಗೆ ಕಲಾವಿದರೊಂದಿಗೆ ಆತ್ಮೀಯವಾಗಿ ಬೆರೆಯುವ ಅಪರೂಪದ ಅವಕಾಶವಾಗಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಎಲ್ಲ ಸದಸ್ಯರಿಗೂ ಆತ್ಮೀಯ ಆಹ್ವಾನ.

ಮುಂದಿನ ದಿನಗಳಲ್ಲಿ ದೆಹಲಿಯ ಶ್ರೇಷ್ಠ ಕಲಾವಿದರ ಭಾಗವಹಿಸುವಿಕೆಯಲ್ಲಿ ಒಂದು ವಿಶಿಷ್ಟ ಚಿತ್ರಕಲಾ ಪ್ರದರ್ಶನವನ್ನು ಆಯೋಜಿಸುವ ಆಸೆ ನಮ್ಮ ಸಂಘಕ್ಕಿದೆ. ಈ ಪ್ರದರ್ಶನದ ಮೂಲಕ ಭಾರತೀಯ ಹಾಗೂ ಕನ್ನಡ ಕಲೆಯ ವೈವಿಧ್ಯಮಯ ಸೌಂದರ್ಯವನ್ನು ಪರಿಚಯಿಸುವ ಉದ್ದೇಶವಿದೆ. ನಮ್ಮವರೇ ಆದ ಖ್ಯಾತ ಕಲಾವಿದರಾದ ಜಿ.ಆರ್. ಈರಣ್ಣ ಹಾಗೂ ಮಂಜುನಾಥ ಕಾಮತ್ ಅವರಂತಹ ಪ್ರತಿಭಾವಂತ ಕಲಾವಿದರ ಕೃತಿಗಳನ್ನು ಈ ವೇದಿಕೆಯಲ್ಲಿ ಪ್ರದರ್ಶಿಸುವ ಯೋಜನೆಯೂ ನಮ್ಮ ಮನಸ್ಸಿನಲ್ಲಿ ಇದೆ.

ಈ ಮಧ್ಯೆ ದೆಹಲಿಯ ಮಳೆಗಾಲ ನಗರಕ್ಕೆ ಹೊಸ ಚೈತನ್ಯ ಮತ್ತು ಹಸಿರಿನ ಸೊಬಗನ್ನು ತಂದಿದೆ. ಪ್ರಕೃತಿಯ ಈ ನವಚೇತನದಂತೆ ನಮ್ಮ ಸಂಘವೂ ಹೊಸ ಕನಸುಗಳು, ಹೊಸ ಯೋಜನೆಗಳು ಮತ್ತು ಹೊಸ ಸಾಂಸ್ಕೃತಿಕ ಪ್ರಯತ್ನಗಳೊಂದಿಗೆ ಇನ್ನಷ್ಟು ಚೈತನ್ಯದಿಂದ ಮುನ್ನಡೆಯಲಿ ಎಂಬುದು ನನ್ನ ಹಾರೈಕೆ.

ನಮ್ಮ ಎಲ್ಲ ಕಾರ್ಯಕ್ರಮಗಳಿಗೆ ನಿರಂತರವಾಗಿ ಬೆಂಬಲ ನೀಡುತ್ತಿರುವ ಸದಸ್ಯರು, ದಾನಿಗಳು, ಕಲಾವಿದರು, ಶಿಕ್ಷಕರು ಹಾಗೂ ಸ್ವಯಂಸೇವಕರಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಇದೇ ಸಹಕಾರ ಮುಂದುವರಿದು ನಮ್ಮ ಸಂಘ ಕನ್ನಡದ ಭಾಷಾ–ಸಾಂಸ್ಕೃತಿಕ ಸೇವೆಯಲ್ಲಿ ಇನ್ನಷ್ಟು ಉನ್ನತ ಸಾಧನೆಗಳನ್ನು ಮಾಡಲಿ ಎಂಬ ವಿಶ್ವಾಸದೊಂದಿಗೆ ಅಭಿಮತ ಸಂಚಿಕೆ ನಿಮ್ಮ ಕೈ ಸೇರುತ್ತಿದೆ.

ಧನ್ಯವಾದಗಳೊಂದಿಗೆ,❑

**ರೇಣುಕುಮಾರ್ ಆರ್.**
ಅಧ್ಯಕ್ಷರು

## ಮುನ್ನೋಟ

ಪ್ರೀತಿಯ ಕನ್ನಡಿಗರೆ,

ನಾನು ಜೂನ್ ತಿಂಗಳು ನನ್ನ ಊರು ಕುಂದಾಪುರದಲ್ಲಿದ್ದೆ. ಅಲ್ಲಿನ ಮಳೆ, ಜನ ಮತ್ತು ಕರಾವಳಿಯ ವಾತಾವರಣದಲ್ಲಿ ಕಾಲ ಕಳೆದು ಬಂದೆ. ಈ ಸಂದರ್ಭದಲ್ಲಿ ಅಲ್ಲಿಯ ಜನರು ನಮ್ಮನ್ನು ಬಹಳ ಆತ್ಮೀಯವಾಗಿ ಗೌರವಿಸಿದಾಗ ನನ್ನ ಹೃದಯ ತುಂಬಿ ಬಂತು. ನಾವು ಮಾಡುವ ಅಳಿಲು ಸೇವೆಯಿಂದ ದಕ್ಕುವ ಪ್ರೀತಿ ಮತ್ತು ಗೌರವ ಆತ್ಮ ತೃಪ್ತಿಯನ್ನು ತಂದುಕೊಡುತ್ತವೆ.

ನಮ್ಮ ಭಾಷೆ ನಮ್ಮ ಮಾತೆ. ಕನ್ನಡ ಭಾಷೆಯ ಶ್ರೀಮಂತಿಕೆ ನಮ್ಮ ಸಾಹಿತ್ಯ, ಕಾದಂಬರಿ, ಜನಪದ, ಕೀರ್ತನೆ, ವಚನ ಹೀಗೆ ವೈವಿಧ್ಯಮಯವಾಗಿ ಹರಡಿದೆ. ತಾಯಿಭಾಷೆ ಕನ್ನಡವಲ್ಲದಿದ್ದರೂ ಅತಿ ಹೆಚ್ಚು ಕನ್ನಡ ಹಾಡುಗಳನ್ನು ಹಾಡಿದ ಸಿರಿಕಂಠದ ಗಾಯಕಿ ಎಸ್. ಜಾನಕಿ ನಮ್ಮ ಪ್ರೀತಿಯ ಜಾನಕಮ್ಮ ಕನ್ನಡ ನಾಡು ಮತ್ತು ನುಡಿಯನ್ನು ಎಷ್ಟು ಪ್ರೀತಿಸುತ್ತಿದ್ದರು ಎಂದು ಅವರು ತಮ್ಮ ಕೊನೆ ದಿನಗಳನ್ನು ಮೈಸೂರಿನಲ್ಲಿ ಇಷ್ಟ ಪಟ್ಟು ಕಳೆದಿದ್ದ ಸಂಗತಿಯೇ ಹೇಳುತ್ತದೆ. ಅವರು ಹಾಡಿರುವ ಹಾಡುಗಳು ಸರ್ವಕಾಲಕ್ಕೂ ಅಮರ ಮತ್ತು ಮಧುರ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇನೆ.

ಜುಲೈ ತಿಂಗಳು ದೆಹಲಿ ಕರ್ನಾಟಕ ಸಂಘ ಚಟುವಟಿಕೆಯ ತಾಣವಾಗಿದ್ದಕ್ಕೆ ನಾವೆಲ್ಲ ಒಟ್ಟಾರೆ ಸಾಕ್ಷಿಯಾದೆವು. ದೆಹಲಿ ಕರ್ನಾಟಕ ಸಂಘದ ವಾರ್ಷಿಕೋತ್ಸವ ಅದ್ದೂರಿಯಾಗಿ ಜನಮೆಚ್ಚುಗೆ ಗಳಿಸಿತು. ನಮ್ಮ ದೆಹಲಿ ಕನ್ನಡ ಕಲಾವಿದರು ಮತ್ತು ಪೋಷಕರು ಸಭಾಂಗಣದಲ್ಲಿ ಕಿಕ್ಕಿರಿದು ತುಂಬಿ ಪ್ರೋತ್ಸಾಹಿಸಿದ ಹಿರಿಮೆ ನಮ್ಮ ದೆಹಲಿ ಕನ್ನಡಿಗರಿಗೆ ಸಲ್ಲಬೇಕು.

ಕರ್ನಾಟಕದಿಂದ ಬಂದು ತರಬೇತಿ ನೀಡಿ ಕಾರ್ಯಕ್ರಮದ ರೂಪುರೇಷೆಗೆ ಜೀವ ನೀಡಿದ ಶ್ರೀ ಲಕ್ಷ್ಮಣ ನೆಲಸೊಗಡು ಮತ್ತು ಶ್ರೀ ದರ್ಶನ್ ಅವರಿಗೆ ಎಲ್ಲರ ಪರವಾಗಿ ಧನ್ಯವಾದಗಳು.

ನಮ್ಮ ಮುಂದಿನ ಯೋಜನೆಗಳೆಲ್ಲವೂ ನಿಮ್ಮೆಲ್ಲರ ಅಭಿಲಾಷೆಗೆ, ಆಸೆಗೆ ಪೂರಕವಾಗಿರುತ್ತವೆ ಎಂದು ತಿಳಿಸಲಿಚ್ಛಿಸುವೆ. ಎಲ್ಲರೂ ಸೇರಿ ನಮ್ಮ ನಾಡು–ನುಡಿಯ ಶ್ರೀಮಂತಿಕೆಯನ್ನು ರಾಷ್ಟ್ರ–ರಾಜಧಾನಿಯಲ್ಲಿ ಪಸರಿಸೋಣ.

**ಎಲ್ಲಾದರು ಇರು–ಹೇಗಾದರು ಇರು ಎಂದೆಂದಿಗೂ ಕನ್ನಡವಾಗಿರುವ ಧ್ಯೇಯ ನನ್ನದು.** ❑

**ರಾಧಾಕೃಷ್ಣ**
ಪ್ರಧಾನ ಕಾರ್ಯದರ್ಶಿ





ದಿನಾಂಕ : 19.07.2026 ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಸುಮಾರು 500 ಕ್ಕೂ ಹೆಚ್ಚು ಪ್ರೇಕ್ಷಕರು ಕಣ್ಣನ ತುಂಬಿಕೊಳ್ಳಲು ರುವಾರಿಗಳಾದ ಜನಪದ ಕಲೆಗಳ ತರಬೇತುದಾರ ಶ್ರೀ ಲಕ್ಷ್ಮಣ್ ನೆಲಸೊಗಡು, ಚಲನಚಿತ್ರ ನೃತ್ಯ ಸಂಯೋಜಕ ಶ್ರೀ ದರ್ಶನ್ ಮತ್ತು ಸಂಗೀತ ವಾದಕ ಶ್ರೀ ಹರ್ಷ ಸತತ 8 ದಿನಗಳ ಕಾಲ 4 ವರ್ಷದಿಂದ 70 ವರ್ಷದ ದೆಹಲಿ ಕನ್ನಡಿಗರಿಗೆ ತರಬೇತಿ ನೀಡಿ ಕರುನಾಡ ಕಲಾ ವೈಭವವನ್ನು ಸಂಘದ ವೇದಿಕೆಯಲ್ಲಿ ಕಳೆ ಕಟ್ಟಿಸಿದರು. ಈ ಐತಿಹಾಸಿಕ ಕಾರ್ಯಕ್ರಮಕ್ಕೆ ಶ್ರಮಿಸಿದ ಇವರು ತಾಯ್ನಾಡಿಗೆ ತೆರಳುತ್ತಿರುವ ಸಂದರ್ಭದಲ್ಲಿ ಜಂಟಿ ಕಾರ್ಯದರ್ಶಿಗಳಾದ ಶ್ರೀ ಸಂತೋಷ ಜೆ. ಮತ್ತು ಶ್ರೀಮತಿ ಅಶ್ವಿನಿ ಬಿ.ಎಸ್. ಅವರು ತರಬೇತುದಾರರಿಗೆ ಗೌರವ ಪೂರ್ವ ಬೀಳ್ಕೊಡುಗೆ ನೀಡಿದರು.

---

### ಓದುಗರಿಗೆ ಆಹ್ವಾನ

**"ಸ್ವಾತಂತ್ರ್ಯ ಎಂದರೆ ನಿಮಗೆ ಏನು?"**

ಸ್ವಾತಂತ್ರ್ಯವು ಕೇವಲ ಇತಿಹಾಸದ ನೆನಪು ಅಲ್ಲ; ಅದು ಪ್ರತಿದಿನವೂ ನಮ್ಮ ಬದುಕಿನಲ್ಲಿ ಅರ್ಥ ಪಡೆದುಕೊಳ್ಳುವ ಮೌಲ್ಯ. ಸ್ವಾತಂತ್ರ್ಯದ ಸಾರ್ಥಕತೆ, ಸಂವಿಧಾನದ ಆಶಯಗಳು, ಪ್ರಜಾಪ್ರಭುತ್ವದ ಬಲ, ಸಮಾನತೆ, ನ್ಯಾಯ, ವೈಯಕ್ತಿಕ ಅನುಭವಗಳು ಅಥವಾ ನಿಮ್ಮ ಕನಸಿನ ಭಾರತದ ಕುರಿತು ನಿಮ್ಮ ಚಿಂತನೆಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಿ.

ಸ್ವಾತಂತ್ರ್ಯ ದಿನಾಚರಣೆಯ ವಿಶೇಷ ಸಂಚಿಕೆಯ ಅಂಗವಾಗಿ ಓದುಗರಿಂದ 150–300 ಪದಗಳ ಅನಿಸಿಕೆ, ಅಭಿಪ್ರಾಯ ಅಥವಾ ಸಣ್ಣ ಲೇಖನಗಳನ್ನು ಆಹ್ವಾನಿಸುತ್ತಿದ್ದೇವೆ.

ಆಯ್ಕೆಯಾದ ಬರಹಗಳನ್ನು ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ನಿಮ್ಮ ಹೆಸರು, ಊರು ಹಾಗೂ ಸಂಪರ್ಕ ಸಂಖ್ಯೆಯೊಂದಿಗೆ ನಿಗದಿತ ದಿನಾಂಕದೊಳಗೆ ನಿಮ್ಮ ಬರಹವನ್ನು ಕಳುಹಿಸಿ.

ನಿಮ್ಮ ಚಿಂತನೆಗಳು ಓದುಗರಲ್ಲಿ ಹೊಸ ಸಂವಾದಕ್ಕೆ ನಾಂದಿ ಹಾಡಲಿ. ನಿಮ್ಮ ಲೇಖನಗಳನ್ನು ಆತ್ಮೀಯವಾಗಿ ನಿರೀಕ್ಷಿಸುತ್ತಿದ್ದೇವೆ.

ಮಾನ್ಯರೇ,

2025–26 ಶೈಕ್ಷಣಿಕ ವರ್ಷದಲ್ಲಿ 10ನೇ ಮತ್ತು 12ನೇ ತರಗತಿಯಲ್ಲಿ ಶೇ. 90 ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆದ ಹಾಗೂ 2025–26ರ ಸಾಲಿನಲ್ಲಿ ವಿಜ್ಞಾನ, ಕಲೆ, ವಾಣಿಜ್ಯ, ಇಂಜಿನಿಯರಿಂಗ್, ವೈದ್ಯಕೀಯ, ಫೈನ್ ಆರ್ಟ್ಸ್, ಕಾನೂನು ಮುಂತಾದ ವಿಷಯಗಳಲ್ಲಿ ಪದವಿಗಳನ್ನು ಪಡೆದಿರುವ ಸಂಘದ ಆಜೀವ ಸದಸ್ಯರ ಮಕ್ಕಳ ವಿವರವನ್ನು ಅಭಿಮತದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಆದ್ದರಿಂದ, ಈ ಶೈಕ್ಷಣಿಕ ವರ್ಷದಲ್ಲಿ ಶೇ 90ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಹಾಗೂ ಪದವೀಧರ(ರೆ) ಯಾಗಿರುವ ಸಂಘದ ಸದಸ್ಯರ ಮಕ್ಕಳ ಅಂಕಪಟ್ಟಿ, ಭಾವಚಿತ್ರ, ಪೋಷಕರ ಹೆಸರು ಮುಂತಾದ ವಿವರಗಳನ್ನು ದಿನಾಂಕ 31.08.2026ಕ್ಕಿಂತ ಮೊದಲು ಸಂಘದ ಇಮೇಲ್ : dksangha@gmail.com ಗೆ ಕಳುಹಿಸಿಕೊಡಬೇಕಾಗಿ ವಿನಂತಿ.

***ಪ್ರಧಾನ ಕಾರ್ಯದರ್ಶಿ***



# ದೆಹಲಿ ಕರ್ನಾಟಕ ಸಂಘದ ವಾರ್ಷಿಕೋತ್ಸವ ಸಾಂಸ್ಕೃತಿಕ ಕಲರವ




ದೆಹಲಿ ಕರ್ನಾಟಕ ಸಂಘವು ದಿನಾಂಕ 19.07.2026 ರಂದು ಸಂಘದ ವಾರ್ಷಿಕೋತ್ಸವದ ಅಂಗವಾಗಿ ಕಲರವ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಕರ್ಣಾಟಕ ಬ್ಯಾಂಕಿನ ದೆಹಲಿ ಪ್ರಾದೇಶಿಕ ಕಛೇರಿಯ ಡೆಪ್ಯುಟಿ ಜನರಲ್ ಮ್ಯಾನೇಜರ್ ಶ್ರೀ ಬಸವರಾಜ ದೇಸಳ್ಳಿ ಅವರು ಆಗಮಿಸಿದ್ದರು. ಕಾರ್ಯಕ್ರಮವನ್ನು ದೀಪ ಪ್ರಜ್ವಲಿಸುವುದರೊಂದಿಗೆ ಆರಂಭಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಬಸವರಾಜ ದೇಸಳ್ಳಿಯವರು ಮಾತನಾಡುತ್ತಾ ದೇಶದ ರಾಜಧಾನಿಯಲ್ಲಿ ತಾಯಿಭಾಷೆಯಾದ ಕನ್ನಡದ ಸಂಸ್ಕೃತಿಯನ್ನು ಜೀವಂತವಾಗಿಟ್ಟಿರುವ ತಮ್ಮೆಲ್ಲರ ನಡುವೆ ಇರುವುದು ನನ್ನ ಸೌಭಾಗ್ಯ. 1948ರಲ್ಲಿ ಸ್ಥಾಪನೆಯಾದ ದೆಹಲಿ ಕರ್ನಾಟಕ ಸಂಘವು 80ವರ್ಷಗಳ ಅವಧಿಯಲ್ಲಿ ಪ್ರತಿವರ್ಷವೂ ಈ ಕಲರವದಂತಹ ಸುಂದರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡುತ್ತ ಬಂದಿದೆ. ಅದೇ ರೀತಿ ಕರ್ನಾಟಕ ಬ್ಯಾಂಕ್ ಕೂಡ 1978ರಲ್ಲಿ ತನ್ನ ಮೊದಲ ಶಾಖೆ ಆರಂಭಿಸಿತ್ತು. ತನ್ನ 27 ಶಾಖೆಗಳ ಮೂಲಕ ದೆಹಲಿ ಕನ್ನಡಿಗರಿಗೆ ಹಾಗೂ ಕನ್ನಡೇತರರಿಗೆ ನಿರಂತರವಾಗಿ ಆರ್ಥಿಕ ಸೇವೆಯನ್ನು ನೀಡುತ್ತಾ ಬಂದಿದೆ. ಈ ಎರಡೂ ಸಂಸ್ಥೆಗಳ ಭಾವನಾತ್ಮಕ ಬಾಂಧವ್ಯ, ಹೀಗೆ ಮುಂದುವರಿಯಲಿ. ದೆಹಲಿ ಕರ್ನಾಟಕ ಸಂಘವು ಕನ್ನಡಿಗರನ್ನು ಒಂದುಗೂಡಿಸಿದರೆ, ಕರ್ಣಾಟಕ ಬ್ಯಾಂಕ್ ಆರ್ಥಿಕ ಪ್ರಗತಿಗೆ ಹೆಗಲುಕೊಟ್ಟು ನಿಂತಿದೆ. ಕರ್ನಾಟಕ ಫುಡ್ ಸೆಂಟರ್ ರಾಜಧಾನಿಯಲ್ಲಿ ಕರ್ನಾಟಕದ ವಿಶಿಷ್ಟ ಭೋಜನವನ್ನು ನೀಡುತ್ತಿದೆ. ಈ ಮೂರೂ ಸಂಸ್ಥೆಗಳ ಮತ್ತು ದೆಹಲಿ ಶಿಕ್ಷಣ ಸಂಸ್ಥೆಗಳ ಪ್ರೀತಿ ಸೌಹಾರ್ದತೆಯ ವಾತಾವರಣದಲ್ಲಿ ಮೂರು ವರ್ಷ ಕಳೆದದ್ದೇ ಗೊತ್ತಾಗಲಿಲ್ಲ. ಕಳೆದ 20 ವರ್ಷದಿಂದಲೂ ಕರ್ಣಾಟಕ ಬ್ಯಾಂಕ್ ನಿಮ್ಮೊಂದಿಗಿದೆ. ಈ ಬಾಂಧವ್ಯ–ಸಹಭಾಗಿತ್ವ ಮುಂದೆ ಇನ್ನೂ ಐವತ್ತು ವರ್ಷಗಳು ಹೀಗೇ ಮುಂದುವರಿಯಲಿ, ಇಪ್ಪತ್ತೇಳು ಶಾಖೆಗಳು ನೂರಾಗಲಿ. ದೆಹಲಿ ಕರ್ನಾಟಕ ಸಂಘ ಇನ್ನೂ ಪ್ರಗತಿಯನ್ನು ಸಾಧಿಸಲಿ ಎಂದು ಹಾರೈಸುತ್ತಾ ಹೊಸ ಕಾರ್ಯಕಾರಿ ಸಮಿತಿಯ ಮೊದಲ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಹಾಗೂ ಎಲ್ಲ ಪದಾಧಿಕಾರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

ನಂತರ ಮಾತನಾಡಿದ ಸಂಘದ ಅಧ್ಯಕ್ಷ ಶ್ರೀ ರೇಣುಕುಮಾರ್ ಅವರು ನಿಮ್ಮೆಲ್ಲರ ಪ್ರೀತಿ ವಿಶ್ವಾಸದಿಂದ ಹೊಸ ಕಾರ್ಯಕಾರಿ ಸಮಿತಿ ಬಂದಿದೆ. ಬಹಳಷ್ಟು ವಿಷಯಗಳಲ್ಲಿ ಹೊಸತನ ಕಾಣುತ್ತಿದೆ. ಕರ್ಣಾಟಕ ಬ್ಯಾಂಕಿನ ಡಿಜಿಎಂ ಮುಂದಕ್ಕೆ ಜನರಲ್ ಮ್ಯಾನೇಜರ್ ಆಗಲಿ ಅಥವಾ ಅದಕ್ಕಿಂತ ಹೆಚ್ಚಿನ ಹುದ್ದೆ ಡೈರೆಕ್ಟರ್ ಆಗಲಿ ಇದಕ್ಕೆ ದೆಹಲಿ ಕನ್ನಡಿಗರ ಆಶಯ ಸದಾ ನಿಮ್ಮ ಮೇಲಿರುತ್ತದೆ ಎಂದರು.

ಕನ್ನಡಿಗರ ಪಾಲಿಗೆ ದೆಹಲಿ ಕರ್ನಾಟಕ ಸಂಘ, ಕರ್ನಾಟಕ ಸಂಘ ಎಂದರೆ ಕರ್ನಾಟಕ ಫುಡ್ ಸೆಂಟರ್, ಕರ್ನಾಟಕ ಫುಡ್ ಸೆಂಟರ್ ಎಂದರೆ ಕರ್ಣಾಟಕ ಬ್ಯಾಂಕ್. ಇದರಲ್ಲಿ ನಾವು ನೀವು ಎಂಬ ಶ್ರೇಯ ಏನೂ ಇಲ್ಲ, ಇದೆಲ್ಲ ಶ್ರೇಯ ಈ ಸಂಘವನ್ನು ಕಟ್ಟಿ ಬೆಳೆಸಿದ ನಮ್ಮ ಹಿರಿಯರಿಗೆ ಸಲ್ಲುತ್ತದೆ. ಅವರ ಮುಂದಾಲೋಚನೆ ಏನಿತ್ತು ನೋಡಿ, ಮುಂದೊಂದು ದಿನ ಸಾವಿರಾರು ಜನ ಕನ್ನಡಿಗರು ಇಲ್ಲಿ ನೆಲೆಸುತ್ತಾರೆ ಇಂತಹ ಒಂದು ಕಾಲ ಬರುತ್ತೆ ಎಂದು ಕರ್ಣಾಟಕ ಬ್ಯಾಂಕನ್ನು ಕರ್ನಾಟಕ ಫುಡ್ ಸೆಂಟರನ್ನು ಇಲ್ಲಿ ಮಾಡಿರುತ್ತಾರೆ ಎಂದು ನುಡಿದರು. ದೆಹಲಿಯಲ್ಲಿ ಹುಟ್ಟಿ, ದೆಹಲಿಯಲ್ಲಿ ವಿದ್ಯಾಭ್ಯಾಸ ಮಾಡಿದಂತಹ ಕನ್ನಡದ ಮಕ್ಕಳು, ಕನ್ನಡವನ್ನು ಮಾತನಾಡಬಲ್ಲರು, ಕನ್ನಡವನ್ನು ಕಲಿಯಬಲ್ಲರು, ಎಂಬ ಕಲ್ಪನೆ ಇದೆಯಲ್ಲ ಅಂತಹ ಕಲ್ಪನೆಯ ಪ್ರತೀಕವಾಗಿ ಹುಟ್ಟಿಕೊಂಡಿದ್ದೇ ಈ ಸಂಘ. ಆ ಕಲ್ಪನೆ ಇಂದು ಹೆಮ್ಮರವಾಗಿ ಬೆಳೆದು 77 ವಸಂತಗಳನ್ನು ಕಳೆದು ಬೆಳಯುತ್ತಾ ಇದೆ ಎಂದರು. ಅದರ ಅಭಿವೃದ್ಧಿಯ ಶ್ರೇಯ ಸಂಘ ಕಟ್ಟಿದ ಮೊದಲ ವ್ಯಕ್ತಿಯಿಂದ ಹಿಡಿದು ಇಂದು ಬಂದು ದೆಹಲಿ ಕರ್ನಾಟಕ ಸಂಘಕ್ಕೆ ಕಾಲಿಟ್ಟಂತಹ ಪ್ರತಿಯೊಬ್ಬ ಕನ್ನಡಿಗರಿಗೂ ಸಲ್ಲುತ್ತದೆ. ಆ ಎಲ್ಲ ಹಿರಿಯರಿಗೆ ನಮಸ್ಕಾರಗಳು ಹಾಗೂ ಅಭಿನಂದನೆಗಳು.




ಇವತ್ತಿನ ಕಾರ್ಯಕ್ರಮದಲ್ಲಿ ಕಾರ್ಯಕಾರಿ ಸಮಿತಿಯ 17 ಜನ ಕೂಡಾ ತಮ್ಮನ್ನು ತಾವು

ಸಕ್ರೀಯವಾಗಿ ತೊಡಗಿಸಿಕೊಂಡಿರುವುದು ನನಗೆ ಬಹಳಷ್ಟು ಖುಷಿ ತಂದಿದೆ ಎಂದರು.

ಇತ್ತೀಚೆಗೆ ನಿಮ್ಮೆಲ್ಲರ ಪ್ರತಿನಿಧಿಯಾಗಿ ನಾನು ಬೆಂಗಳೂರಿಗೆ ಹೋಗುವ ಅವಕಾಶ ಸಿಕ್ಕಿತ್ತು. ಅಲ್ಲಿ ನನ್ನನ್ನು ಸನ್ಮಾನಿಸಲಾಯಿತು. ನಾನು ಹೋಗಿದ್ದು ಶರಣ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಕ್ಕೆ, 12ನೇ ಶತಮಾನದಲ್ಲಿ ಬಸವಣ್ಣನವರ ಕ್ರಾಂತಿಯ ಸಂದರ್ಭದಲ್ಲಿ ಶರಣರು ನೀಡಿದ ವಚನಗಳ ತಾಳೆಗರಿಗಳು ನಾಶಗೊಂಡಿದ್ದವು. ಆ ಸಂದರ್ಭದಲ್ಲಿ ವಿಶ್ವದಾದ್ಯಂತ ಹರಿದು ಹಂಚಿಹೋಗಿದ್ದ ವಚನ ಸಾಹಿತ್ಯವನ್ನು ವಚನ ಪಿತಾಮಹರೆಂದೇ ಖ್ಯಾತರಾದ ಫ.ಗು. ಹಳಕಟ್ಟಿ ಎಂಬ ಮಹಾನ್ ಚೇತನ ದೇಶಾದ್ಯಂತ ಸಂಚರಿಸುತ್ತ ವಚನಗಳ ಸಂಗ್ರಹಣೆ, ಸಂಶೋಧನೆ, ಸಂಸ್ಕರಣೆಯನ್ನು ಮಾಡಿ ನಮಗಾಗಿ, ನಮ್ಮ ಮುಂದಿನ ಪೀಳಿಗೆಗಾಗಿ ಉಳಿಸಿಹೋಗಿದ್ದಾರೆ. ವಚನ ಸಾಹಿತ್ಯ ಕನ್ನಡ ಸಾಹಿತ್ಯದ ಒಂದು ಮೇರು ಭಾಗವಾಗಿದೆ, ವಚನದಲ್ಲಿರುವಂತಹ ಬಹಳಷ್ಟು ಅಂಶಗಳು ಮಾನವ ಜೀವನಕ್ಕೆ ಅವರ ಸಾರ್ಥಕತೆಗೆ ಅನುಕೂಲವಾಗುವಂತಹ ವಿಷಯಗಳಾಗಿವೆ. ಇವೆಲ್ಲವನ್ನು ಉಳಿಸಿ ಬೆಳೆಸಬೇಕು ಎಂಬ ಆಶಯದಲ್ಲಿ ಮೈಸೂರಿನ ಸುತ್ತೂರು ಮಹಾ ಸಂಸ್ಥಾನದ ಪೂಜ್ಯರಾದಂತಹ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಗಳು ಶರಣ ಸಾಹಿತ್ಯ ಪರಿಷತ್ತನ್ನು ಹುಟ್ಟುಹಾಕಿದರು. ಮೈಸೂರಿನ ಮಹಾರಾಜರು ಹುಟ್ಟಿಹಾಕಿದಂತಹ ಸಾಹಿತ್ಯ ಪರಿಷತ್ತು ಹೇಗಿದೆಯೋ ಅದೇ ರೀತಿ ಕರ್ನಾಟಕದ ಪ್ರತಿ ಜಿಲ್ಲೆಗಳಲ್ಲಿ, ನಗರಗಳಲ್ಲಿ ಶರಣ ಸಾಹಿತ್ಯ ಪರಿಷತ್ತುಗಳನ್ನು ನಿರ್ಮಿಸಿ ವಚನ ಸಾಹಿತ್ಯವನ್ನು ಬೆಳೆಸುವಂತಹ ಮಹತ್ಕಾರ್ಯವನ್ನು ಮಾಡುತ್ತಾ ಇದ್ದಾರೆ ಎಂದರು.

ನಮ್ಮ ಹಿರಿಯರು ದೆಹಲಿ ಕರ್ನಾಟಕ ಸಂಘದಲ್ಲಿ ನಡೆಸಿಕೊಂಡು ಬಂದಂತಹ ಕನ್ನಡ ಕಲಿಕಾ ಕೇಂದ್ರವನ್ನು ಸರ್ಟಿಫಿಕೇಟ್ ಕೋರ್ಸ್ ಮಾಡಬೇಕೆಂಬ ಕಾರ್ಯಕಾರಿ ಸಮಿತಿಯ ನಿರ್ಣಯದಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ನಡೆಸುವಂತಹ ಕನ್ನಡ ಕಲಿಕಾ ಮಾದರಿಯನ್ನು ಅದರ ಸಿಲೆಬಸ್ ಪ್ರಕಾರ ನೀಡಿ, ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯುವಂತಹ ವ್ಯವಸ್ಥೆಯನ್ನು ರೂಪಿಸುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಕನ್ನಡ ಕಲಿಕಾ ಕೇಂದ್ರ ಕೇವಲ ಕನ್ನಡ ಕಲಿಕಾ ಕೇಂದ್ರವಾಗಿರುವುದಿಲ್ಲ ಸರ್ಟಿಫಿಕೇಟ್ ಕೋರ್ಸ ಆಗಿರುತ್ತದೆ ಎಂದರು.

ಅದೇ ರೀತಿಯಾಗಿ ಸಂಗೀತ ಮತ್ತು ನೃತ್ಯ ತರಬೇತಿಯನ್ನು ನಡೆಸುತ್ತಾ ಇದ್ದೀವಿ. ತರಬೇತಿ ತರಬೇತಿಯಾಗಿ ಉಳಿಯಬಾರದು. ಮುಂದಿನ ದಿನಗಳಲ್ಲಿ ಕಲಿಯುವವರಿಗೆ ಪ್ರಯೋಜನವಾಗುವಂತಿರಬೇಕು ಆ ರೀತಿ ಅದನ್ನೂ ಸರ್ಟಿಪಿಕೇಟ್ ಕೋರ್ಸ್ ಮಾಡುವ ಯೋಜನೆ ಇದೆ. ಸರ್ಟಿಪಿಕೇಟ್ ನೀಡಬಲ್ಲ ಮಾನ್ಯತೆ ಪಡೆದಂತಹ ಸಂಸ್ಥೆಗಳಿಂದ ನೀಡಬೇಕೆಂದು ನಿರ್ಣಯ ಮಾಡಿದ್ದೇವೆ ಎಂದರು. ನಾವು ಮುಂದಿನ ದಿನಗಳಲ್ಲಿ ಸಂಘದಲ್ಲಿ ಕಲಾವಿದರನ್ನು ಹುಟ್ಟು ಹಾಕುವ ಸಲುವಾಗಿ ಕೀಬೋರ್ಡ್, ತಬಲಾ ಮುಂತಾ ಕೀಬೋರ್ಡ್ ಕಲಿಯುವಂತೆ ಪ್ರತಿ ವಾದ್ಯಗಳಲ್ಲಿ ಇಬ್ಬರು ಖಾಯಂ ದೆಹಲಿವಾಸಿ ಕನ್ನಡಿಗರಿಗೆ ಸಂಘದ ವತಿಯಿಂದ ತರಬೇತಿ ನೀಡಬೇಕೆಂದು ತೀರ್ಮಾನ ಮಾಡಿದ್ದೇವೆ. ಮುಂದಿನ ಎರಡು ವರ್ಷಗಳಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಕೀಬೋರ್ಡ್ ನುಡಿಸುವವರು, ತಬಲಾ ಬಾರಿಸುವವರು ದೆಹಲಿ ಕರ್ನಾಟಕ



ಸಂಘದವರಾಗಿಬೇಕೆಂಬುದು ನಮ್ಮ ಆಶಯವಾಗಿದೆ ಎಂದರು.

ಈಗಾಗಲೇ ಸರ್ಕಾರ ದೆಹಲಿಯಲ್ಲಿ IAS/IPS/IRS ಮಾಡಲು ಬರುವ ವಿದ್ಯಾರ್ಥಿಗಳಿಗಾಗಿ ಕಟ್ಟಡ ಕಟ್ಟುವ ಯೋಜನೆಯನ್ನು ಹೊಂದಿದೆ. ಉನ್ನತ ವಿದ್ಯಾಭ್ಯಾಸಕ್ಕಾಗಿ ದೆಹಲಿಗೆ ಬರುವ ಮಕ್ಕಳಿಗಾಗಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಅಡಿಷನಲ್ ಜಾಗ ಇದೆ. ಅಲ್ಲಿ ಮಲ್ಟಿ ಪರ್ಪಸ್ ಹಾಲ್ ಮಾಡಬೇಕೂಂತ ಆಸೆ ಇದೆ. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಬರುವ ಮಕ್ಕಳ ವಾಸ್ತವ್ಯಕ್ಕೆ ಅನುಕೂಲವಾಗಬಹುದು. ತಾತ್ವಿಕವಾಗಿ ನಾವು ನಮ್ಮ ಸಮಿತಿಯಿಂದ ಒಪ್ಪಿಗೆಯನ್ನು ಪಡೆದುಕೊಂಡಿದ್ದೇವೆ. ಮುಂದಿನ ದಿನಗಳಲ್ಲಿ ಅದನ್ನು ಸಹ ಕಾರ್ಯರೂಪಕ್ಕೆ ತರುವಲ್ಲಿ ನಾವು ಶ್ರಮಿಸುತ್ತೇವೆ ಎಂದರು. ಇದೆಲ್ಲವನ್ನು ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನ, ಅನುಮತಿ ತೆಗೆದುಕೊಂಡು ಮಾಡುತ್ತೇವೆ ಎಂದರು.

ಸಭಾ ಕಾರ್ಯಕ್ರಮದ ಕೊನೆಯಲ್ಲಿ ಶ್ರೀ ಬಸವರಾಜ ದೇಸಳ್ಳಿಯವರನ್ನು ಸಂಘದ ಪರವಾಗಿ ಶಾಲು ಹೊದಿಸಿ, ಸಂಘದ ಸ್ಮರಣಿಕೆ ನೀಡಿ ಅಭಿನಂದಿಸಲಾಯಿತು.

ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಅವರು ವಂದನಾರ್ಪಣೆ ಸಲ್ಲಿಸಿದರು. ಖಜಾಂಚಿ ಶ್ರೀಮತಿ ಆಶಾಲತಾ ಎಂ. ಅವರು ಕಾರ್ಯಕ್ರಮ ನಿರೂಪಿಸಿದರು.

ತದನಂತರ ಎಲ್ಲರೂ ಕಾಯುತ್ತಿದ್ದ ಕಾರ್ಯಕ್ರಮದ ರೋಚಕ ಭಾಗವಾದ ಸಾಂಸ್ಕೃತಿಕ ಕಲರವ ಆರಂಭವಾಯಿತು. ಅಂತರರಾಷ್ಟ್ರೀಯ ನೃತ್ಯ ಸಂಯೋಜಕ ಶ್ರೀ ಲಕ್ಷ್ಮಣ ನೆಲಸೊಗಡು ಮತ್ತು ರಿಯಾಲಿಟಿ ಶೋ ಹಾಗೂ ಚಲನಚಿತ್ರ ನೃತ್ಯ ಸಂಯೋಜಕ ಶ್ರೀ ದರ್ಶನ್ ಅವರಿಂದ ತರಬೇತಿ ಪಡೆದ ಸ್ಥಳೀಯ ಕಲಾವಿದರಿಂದ ವಿವಿಧ ಜಾನಪದ ಕಲಾ ಪ್ರಕಾರಗಳಾದ ಜುಗಲ್‌ಬಂದಿ ಜಾನಪದ ಗಾಯನ, ಗಣೇಶ ವೆಲ್‌ಕಮ್ ನೃತ್ಯ, ರೈತ ಮತ್ತು ಸೈನಿಕ ನೃತ್ಯರೂಪಕ, ಅಪ್ಪು ರಿಮಿಕ್ಸ್ ಡಾನ್ಸ್, ಭೀಮನ ಅಮವಾಸ್ಯೆ–ನೃತ್ಯರೂಪಕ, ಶಿವತಾಂಡವ ನೃತ್ಯ, ಜಾನಪದ ಜಾತ್ರೆ, ಸೋಮನ ಕುಣಿತ, ಮಾರಮ್ಮನ ಕುಣಿತ, ಹಾಲಕ್ಕಿ ತಂಡದಿಂದ ಕಳಸ ನೃತ್ಯ, ಚಾವುಟಿ ಮತ್ತು ಮಹಿಷ ನೃತ್ಯ, ಹಾಲಕ್ಕಿ ನೃತ್ಯ, ನವಿಲು ನೃತ್ಯ, ಹುಲಿವೇಷ, ವೀರಗಾಸೆ, ಹಾಲಕ್ಕಿಯವರೊಂದಿಗೆ ಮಾರಮ್ಮನ ಕುಣಿತ, ಚಾವುಟಿ ಮಹಿಷಿ, ದೇವಿಯ ಆಗಮನದೊಂದಿಗೆ ಮಹಿಷಿ ಮರ್ಧನ ಅದ್ಭುತವಾಗಿತ್ತು. ಫಿನಾಲೆ ಹಾಡಿಗೆ ನೃತ್ಯ ಪ್ರದರ್ಶನಗೊಂಡಿತು. ಸಾಂಸ್ಕೃತಿಕ ಕಾರ್ಯಕ್ರಮವನ್ನು ಜಂಟಿ ಕಾರ್ಯದರ್ಶಿ, ಸಾಂಸ್ಕೃತಿಕ ಉಪಸಮಿತಿ ಸಂಚಾಲಕರಾದ ಶ್ರೀ ಸಂತೋಷ ಜೆ. ಅವರು ನಡೆಸಿಕೊಟ್ಟರು.

ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆಯನ್ನು ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಶ್ರೀ ನಾರಾಯಣ ಬಿ., ಶ್ರೀ ಶಿವಪ್ಪ ಎಂ. ಅವರು ನಡೆಸಿಕೊಟ್ಟರು.❑



## ಸಂಘದ ವಾರ್ಷಿಕೋತ್ಸವದ ಅಂಗವಾಗಿ ದಿನಾಂಕ 19.07.2026 ರಂದು ಜರುಗಿದ
## ಸಾಂಸ್ಕೃತಿಕ ಕಲರವ ಕಾರ್ಯಕ್ರಮ ನೀಡಿದ ಸ್ಥಳೀಯ ಕಲಾವಿದರು



























## ಸಂಘದ ವಾರ್ಷಿಕೋತ್ಸವದ ಅಂಗವಾಗಿ ದಿನಾಂಕ 19.07.2026 ರಂದು ಜರುಗಿದ ಸಾಂಸ್ಕೃತಿಕ ಕಲರವ ಕಾರ್ಯಕ್ರಮ ನೀಡಿದ ಸ್ಥಳೀಯ ಕಲಾವಿದರು














# ಯುಗವೊಂದು ಅಂತ್ಯವಾದಂತೆ

**ತಮ್ಮ ಅಮರ ಕಂಠದ ಗಾನಸುಧೆಯಿಂದ ಕೋಟ್ಯಂತರ ಹೃದಯಗಳನ್ನು ತಾಗಿದ ಗಾನಕೋಗಿಲೆ, 'ಗಾನ ಸರಸ್ವತಿ', 'ಸ್ವರ ಸಾಮ್ರಾಜ್ಞಿ' ಡಾ. ಎಸ್. ಜಾನಕಿ ಅವರಿಗೆ ಭಾವಪೂರ್ಣ ನಮನಗಳು. ಭೌತಿಕವಾಗಿ ನಮ್ಮನ್ನಗಲಿದರೂ, ಅವರ ದಿವ್ಯ ಧ್ವನಿ ಎಂದೆಂದಿಗೂ ಅಮರ**

ಒಂದು ಕಾಲವಿತ್ತು, ಅದು ನಮ್ಮ ಬಾಲ್ಯಕಾಲ. ಬೆಳಕಾಗುತ್ತಿದ್ದುದೇ ಆಕಾಶವಾಣಿಯ ಸಿಗ್ನೇಚರ್ ಟ್ಯೂನ್ ನಿಂದ. ಮುಂದೆ ಭಜನೆ–ಭಕ್ತಿಗೀತೆ ಗಳು, ವಾರ್ತೆಗಳು ಪುನಃ ಚಿತ್ರಗೀತೆಗಳು ಹೀಗೆ ನಮ್ಮ ಕಿವಿಗಳು ರೇಡಿಯೋದೊಂದಿಗೆ sync ಆದಂತಿರುತ್ತಿದ್ದವು. ಎದ್ದು ಬ್ರಶ್ ಮಾಡುವ, ಕಸಗುಡಿಸುವ, ದೇವರ ಉಪಗಾರಣೆ ಬೆಳಗಿಕೊಡುವ, ಪೂಜೆಗೆ ಹೂವು ತಂದುಕೊಡುವ ಎಲ್ಲಾ ಕೆಲಸಗಳಲ್ಲಿ ರೇಡಿಯೋ ಜೊತೆಗಿರುತ್ತಿತ್ತು. ಆ ಕಾಲಕ್ಕೆ ಅದೊಂದು ರೀತಿ ಗಡಿಯಾರವಿದ್ದಂತೆ. ಶಾಲೆಗೆ ಹೋಗುವ ಸಮಯ, ಓದುವ ಸಮಯ, ಎಲ್ಲ ನಿರ್ಧಾರವಾಗುತ್ತಿತ್ತು. ಬೆಳಗಿನ ಚಿತ್ರಗೀತೆಗಳನ್ನು ಆಸ್ವಾದಿಸುತ್ತಲೇ ನಾವು ನಮ್ಮ ಪರ್ಮನೆಂಟ್ ಉಪ್ಪಿಟ್ಟು ತಿನ್ನುವ ಕಾರ್ಯಕ್ರಮ ಸಂಪನ್ನಗೊಳ್ಳುತ್ತಿತ್ತು.

ಆಕಾಶವಾಣಿ ಧಾರವಾಡ ಮುಗಿದರೆ, ಭದ್ರಾವತಿ, ವಿವಿಧಬಾರತಿ ಹೀಗೆ ಎಸ್. ಜಾನಕಿ, ಎಸ್.ಪಿಬಿ, ಪಿ.ಬಿ. ಶ್ರೀನಿವಾಸ್, ಸುಮನ್ ಕಲ್ಯಾಣಪುರ್, ಲತಾಮಂಗೇಶ್ಕರ್ ಸುಮಧುರ ಹಾಡುಗಳು ನಮ್ಮ ಬದುಕನ್ನು ಸುಂದರಗೊಳಿಸಿದ್ದ ಕಾಲ. 'ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸ' ಎನ್ನುವಂತಿತ್ತು ಬದುಕು. ಗುಡ್ಡ ದಿನ್ನೆ ಹತ್ತಿ–"ಗಗನವು ಎಲ್ಲೋ ಭೂಮಿಯು ಎಲ್ಲೋ ಒಂದು ಅರಿಯೆ ನಾ" ಕುಣಿದಿದ್ದೇ ಕುಣಿದಿದ್ದು. ಸಂಜೆಯ ಹೋಮ್ ವರ್ಕ್ ಮುಗಿದು ಊಟದ ಸಮಯದಲ್ಲಿ ಮತ್ತೆ ಚಿತ್ರಗೀತೆಗಳನ್ನು ಕೇಳುತ್ತಿದ್ದೆವು.

ರೇಡಿಯೋದಲ್ಲಿ 'ರಾಜಾ ನನ್ನ ರಾಜ'ದ ಗಂಗಮ್ಮಾ.....ಕಲ್ಲೇಟಿಗಿಂತ ನಿನ್ನ ಕಲ್ಲೇಟು ಜೋರಾಗಿ ನಡುಗಿದೆ ಗಡ ಗಡ ಗಂಗಮ್ಮಾ...."ಎನ್ನುವ ಹಾಡು ಬಂದರೆ ಸಾಕು ರೊಟ್ಟಿ ಬಡಿಯುತ್ತಲೋ ಊಟಕ್ಕೆ ಬಡಿಸುತ್ತಲೋ ಇದ್ದ ನಮ್ಮ ಅವ್ವನ ಮುಖ ನಾಚಿ ಕೆಂಪಾಗುತ್ತಿತ್ತು. ಅಪ್ಪ ತುಟಿಯಂಚಿನಲ್ಲೇ ನಗುತ್ತಿರುತ್ತಿದ್ದ. ಯಾಕೆಂದರೆ ಅವ್ವನ ಹೆಸರು ಗಂಗಮ್ಮ. ಆ ಹಾಡು ಬಂತೆಂದರೆ ನಾವು ಮಕ್ಕಳೂ ಮಂಗನಂತೆ ಅವ್ವನನ್ನು ಕಾಡಿಸುತ್ತಿದ್ದೆವು.

ಶ್ರಾವಣ ಮಾಸದಲ್ಲಿ ಮನೆಯಲ್ಲಿ ಸತ್ಯನಾರಾಯಣನ ಪೂಜೆಯಿದ್ದರೆ ಎಲ್ಲರೂ "ಕಾಪಾಡು ಶ್ರೀ ಸತ್ಯ ನಾರಾಯಣ" ಭಕ್ತಿಪರವಶರಾಗಿ ಹಾಡುತ್ತಿದ್ದುದು ಈಗ ಕನಸು ಮಾತ್ರ. "ಉಪಾಸನೆ" ಚಿತ್ರ ಬಂದಾಗಲಂತೂ ಅಪ್ಪ "ಭಾರತ ಭೂಶಿರ ಮಂದಿರ ಸುಂದರಿ, ಭುವನ ಮನೋಹರಿ ಕನ್ಯಾಕುಮಾರಿ", ಸಂಪಿಗೆ ಮರದ ಹಸುರೆಲೆ ಮೇಲೆ ಕೋಗಿಲೆ ಹಾಡಿತ್ತು" ಅದೆಷ್ಟು ಸಲ ಹಾಡಿಸಿ ಕೇಳುತ್ತಿದ್ದನೋ. ಆಗೆಲ್ಲ ಚಿತ್ರಗೀತೆಗಳೆಂದರೆ ಸಾಕು ನಮ್ಮ ನಾಲಿಗೆಯಲ್ಲಿಯೇ ಇರುತ್ತಿತ್ತು. ಗಣೇಶ ಚತುರ್ಥಿಯಲ್ಲಿ ಹಾಡಿದ್ದೇ ಹಾಡಿದ್ದು. ಇದೇ ಗುಂಗಿನಲ್ಲಿ ನಾನೂ ಸಂಗೀತ ಕಲಿಯಬೇಕೆಂದು ರವಿವಾರ ಪೇಟೆಯಲ್ಲಿದ್ದ ಸಂಗೀತ ಶಾಲೆಗೆ ಹೋಗಿ ವಿಚಾರಿಸಿಯೂ ಬಂದಿದ್ದೆ. ಆದರೆ ಮನೆಯಲ್ಲಿ ಕಳಿಸಲಿಲ್ಲ. ಹೀಗೆ ಕನ್ನಡ ಚಿತ್ರಗೀತೆಗಳು ಅಂದರೆ ನಮ್ಮ ಬದುಕಿನ ಭಾವಲೋಕವೇ ಆಗಿತ್ತು. ಅದರಲ್ಲಿ ನಾವೆಲ್ಲ ನಮ್ಮ ನಮ್ಮ ಕಲ್ಪನಾ ವಿಲಾಸದಲ್ಲಿ ವಿಹರಿಸಬಹುದಿತ್ತು. ಹೀಗೆ ನಮ್ಮ ಭಾವಕೋಶವನ್ನು ವಿಸ್ತರಿಸಿದ, ಬದುಕನ್ನು ಸುಂದರಗೊಳಿಸಿದ ಅನೇಕ ಗಾಯಕ ಗಾಯಕಿಯರು ಇಂದು ನಮ್ಮೊಂದಿಗಿಲ್ಲ. ಎಸ್. ಜಾನಕಿಯವರನ್ನು ನೆನೆವಾಗ ಈಗಾಗಲೇ ಅಗಲಿಹೋದ ಪಿ.ಬಿ. ಶ್ರೀನಿವಾಸ್, ಎಸ್.ಪಿ. ಬಾಲಸುಬ್ರಹ್ಮಣ್ಯನ್, ಲತಾ ಮಂಗೇಶ್ಕರ್, ಆಶಾ ಭೋಸಲೆ, ಮೊಹಮ್ಮದ್ ರಫಿ ಎಲ್ಲರೂ ನೆನಪಾಗುತ್ತಾರೆ.

ದಕ್ಷಿಣ ಭಾರತದ "ಗಾನಕೋಗಿಲೆ" ಎಂದೇ ಹೆಸರಾದ ಎಸ್. ಜಾನಕಿ (ಪೂರ್ಣ ಹೆಸರು: ಸಿಸ್ಟ್ಲಾ ಶ್ರೀರಾಮಮೂರ್ತಿ ಜಾನಕಿ) ಕನ್ನಡಿಗರಿಗೆ ಕೇವಲ ಒಬ್ಬ ಹಿನ್ನೆಲೆ ಗಾಯಕಿಯಾಗಿ ಉಳಿಯದೆ, ಮನೆಮನದ ದನಿಯಾಗಿದ್ದರು. ಜುಲೈ 11, 2026 ರಂದು ಅವರು ಮೈಸೂರಿನಲ್ಲಿ ನಿಧನರಾದರು. 60 ವರ್ಷಗಳ ಕಾಲ ನಿರಂತರವಾಗಿ ಹಾಡಿದ ಗಾನಕೋಗಿಲೆ ಹಾಡುನಿಲ್ಲಿಸಿತು. ಎಲ್ಲೆಲ್ಲೂ ದುಃಖದ ನುಡಿಗಳು. ಸಂಗೀತದ ತಾರೆಯೊಂದು ಅಸ್ತಮಿಸಿತು.

1938ರ ಏಪ್ರಿಲ್ 23ರಂದು ಆಂಧ್ರಪ್ರದೇಶದ ಗುಂಟೂರಿನಲ್ಲಿ ಜನಿಸಿದ ಜಾನಕಿ, ಆರು ದಶಕಗಳ ಕಾಲ (1957–2019)ಭಾರತೀಯ ಚಿತ್ರಸಂಗೀತದ ಮೇರುದನಿಯಾಗಿದ್ದರು ಎಂದರೆ ತಪ್ಪಾಗಲಾರದು. 17ಕ್ಕೂ ಹೆಚ್ಚು ಭಾಷೆಗಳಲ್ಲಿ, ಚಿತ್ರ–ಆಲ್ಬಂ–ಟಿವಿ–ಆಕಾಶವಾಣಿ ಸೇರಿ ಸುಮಾರು 48,000 ಹಾಡುಗಳನ್ನು ಹಾಡಿದ ಇವರು, ಎಲ್ಲಕ್ಕಿಂತ ಹೆಚ್ಚು ಹಾಡಿದ್ದು ಮಾತ್ರ ಕನ್ನಡದಲ್ಲೇ.

**ಕನ್ನಡದ ಜೊತೆಗಿನ ಅನುಬಂಧ**

ಜಾನಕಿಯವರ ಕನ್ನಡ ಪಯಣ ಆರಂಭವಾದದ್ದು 1952–53ರಲ್ಲಿ ಎಂದು ಆನ್‌ಲೈನ್‌ನಲ್ಲಿ ಲಭ್ಯವಿರುವ ಮಾಹಿತಿಯಿಂದ ನಮಗೆ ತಿಳಿದುಬರುತ್ತದೆ. 1959ರ ಮಹಿಷಾಸುರ ಮರ್ದಿನಿ ಚಿತ್ರದ "ಗಗನದಲಿ ಮುಗಿಲಾನೇರಿ" (ಜಿ.ಕೆ. ವೆಂಕಟೇಶ್ ಸಂಗೀತ ನಿರ್ದೇಶನ) ಅವರ ಮೊದಲ ಕನ್ನಡ ಹಾಡು.

ಕನ್ನಡದ ಬಹುತೇಕ ಎಲ್ಲ ಮಹಾನ್ ಸಂಗೀತ ನಿರ್ದೇಶಕರಿಗೂ ಪ್ರಿಯವಾಗಿದ್ದ ಧ್ವನಿ ಇವರದ್ದು. ಜಿ.ಕೆ. ವೆಂಕಟೇಶ್, ರಾಜನ್–ನಾಗೇಂದ್ರ, ವಿಜಯಭಾಸ್ಕರ್, ಟಿ.ಜಿ. ಲಿಂಗಪ್ಪ, ಎಂ. ರಂಗರಾವ್, ಉಪೇಂದ್ರಕುಮಾರ್, ಇಳಯರಾಜಾ, ಮತ್ತು ಹಂಸಲೇಖ ಅವರೊಬ್ಬರದ್ದೇ 40ಕ್ಕೂ ಹೆಚ್ಚು ಚಿತ್ರಗಳಲ್ಲಿ ಹಾಡಿದ್ದಾರೆ.

ಡಾ. ರಾಜ್‌ಕುಮಾರ್ ಅವರ ಸುಮಾರು 150 ಚಿತ್ರಗಳಲ್ಲಿ 300ಕ್ಕೂ ಹೆಚ್ಚು ಹಾಡುಗಳನ್ನು ಹಾಡಿದ ಜಾನಕಿಯವರು, ಕನ್ನಡದ ಸುವರ್ಣ ಯುಗವನ್ನು ಸೃಷ್ಟಿಸಿದವರು. ಜಾನಕಿಯವರು ಹಾಡಿದ "ಪೂಜಿಸಲೆಂದೇ" ಹಾಡು ಸ್ವತಃ ರಾಜ್‌ಕುಮಾರ್ ಅವರಿಗೆ ಅತ್ಯಂತ ಪ್ರಿಯವಾದ ಹಾಡಾಗಿತ್ತಂತೆ.

2016ರಲ್ಲಿ "ಇನ್ನು ಮುಂದೆ ನಾನು ಹಾಡಲ್ಲ, ನನ್ನ ಸಂಗೀತ ಜೀವನಕ್ಕೆ ನಿವೃತ್ತಿ ಘೋಷಿಸ್ತಿದ್ದೀನಿ" ಅಂತ ನಿರ್ಧಾರ ಮಾಡಿದಾಗ, ಇಡೀ ಭಾರತದ ಸಿನಿಮಾ ರಂಗವೇ ಜಾನಕಿ ಅಮ್ಮ ತನ್ನ ಕೊನೆಯ ಕಾರ್ಯಕ್ರಮವನ್ನ ಎಲ್ಲಿ ಕೊಡುತ್ತಾರೆ ಅಂತ ಕಾಯುತ್ತಿತ್ತು! ಆದರೆ ಜಾನಕಿ ಅವರು ಚೆನ್ನೈ ಅಥವಾ ಹೈದರಾಬಾದನ್ನು ಆರಿಸಿಕೊಳ್ಳದೇ ಆಕೆ ನೇರವಾಗಿ ಬಂದಿದ್ದು ನಮ್ಮ ಮೈಸೂರಿನ ಮಾನಸಗಂಗೋತ್ರಿಯ ಬಯಲು ರಂಗಮಂದಿರಕ್ಕೆ ! ಸಾವಿರಾರು ಕನ್ನಡಿಗರ ಮುಂದೆ ನಿಂತು, ಕನ್ನಡದ ಹಾಡುಗಳನ್ನೇ ಹಾಡಿ, "ನನಗೆ ಅತಿ ಹೆಚ್ಚು ಪ್ರೀತಿ ಕೊಟ್ಟಿದ್ದು ಈ ಕನ್ನಡದ ಮಣ್ಣು, ಹಾಗಾಗಿ ನನ್ನ ಕೊನೆಯ ಹಾಡು ಈ ಮಣ್ಣಿನಲ್ಲೇ ಇರಬೇಕು" ಅಂತ ಕಣ್ಣೀರು ಹಾಕುತ್ತಾ ಮೈಕ್ ಕೆಳಗಿಡುತ್ತಾರೆ.

**ಸಾಗಿ ಬಂದ ಸಾಧನೆಯ ದಾರಿ**

ಮದ್ರಾಸ್‌ನ ಒಂದು ರೆಕಾರ್ಡಿಂಗ್ ಸ್ಟುಡಿಯೋ. ಮೈಕ್ ಮುಂದೆ ನಿಂತಿದ್ದು ಆಂಧ್ರದ ಒಂದು ಸಣ್ಣ ಹಳ್ಳಿಯಿಂದ ಬಂದ ಒಬ್ಬ ಸಾಧಾರಣ ಹುಡುಗಿ. ನೋಡೋಕೆ ತುಂಬಾನೇ ಸರಳ. ಯಾವುದೇ ಜಂಭ ಇಲ್ಲ, ಗರ್ವ ಇಲ್ಲ. ಆದ್ರೆ ಆಕೆ ಕಣ್ಣು ಮುಚ್ಚಿ, ಉಸಿರೆಳೆದುಕೊಂಡು ಬಾಯಿ ತೆರೆದು ಹಾಡಲು ಶುರು ಮಾಡಿದರೆ ಸಾಕು ಸ್ಟುಡಿಯೋದಲ್ಲಿದ್ದ ದಿಗ್ಗಜ ಸಂಗೀತ ನಿರ್ದೇಶಕರೆಲ್ಲಾ ಎದ್ದು ನಿಲ್ಲುತ್ತಿದ್ದರು. ಆಕೆಯ ಕಂಠದಲ್ಲಿ ಒಂದು 'ಮಾಂತ್ರಿಕತೆ' ಇತ್ತು! ಸಾಮಾನ್ಯವಾಗಿ ಹಿನ್ನೆಲೆ ಗಾಯಕಿ ಆಗಲು ಚಿಕ್ಕ ವಯಸ್ಸಿನಿಂದಲೇ ಕಠಿಣವಾದ ಶಾಸ್ತ್ರೀಯ ಸಂಗೀತ ಕಲಿತಿರಬೇಕು ಎನ್ನುತ್ತಾರೆ. ಆದರೆ ಜಾನಕಿ ಅವರಿಗೆ ಯಾವುದೇ ದೊಡ್ಡ ಮಟ್ಟದ ಶಾಸ್ತ್ರೀಯ ಸಂಗೀತದ ತರಬೇತಿಯೇ ಇರಲಿಲ್ಲ.

ಆಕೆ ಬರೀ ರೇಡಿಯೋದಲ್ಲಿ ಬರೋ ಹಾಡುಗಳನ್ನ ಕೇಳಿ, ಮನಸ್ಸಿನಲ್ಲೇ ಅರಗಿಸಿಕೊಂಡು ಬೆಳೆದವರು. ಯಾವುದೇ ಶಾಸ್ತ್ರೀಯ ತರಬೇತಿ ಇಲ್ಲದೆ ಮದ್ರಾಸ್ ಸ್ಟುಡಿಯೋಗೆ ಕಾಲಿಟ್ಟ ಈ ಹೆಣ್ಣುಮಗಳು, ಮುಂದೆ ಎಂಥಾ ಕಷ್ಟದ ರಾಗ ಕೊಟ್ಟರೂ ಲೀಲಾಜಾಲವಾಗಿ ಹಾಡಿ, ಸಂಗೀತ ಕಲಿತ ಪಂಡಿತರೇ ಬೆರಗಾಗುವಂತೆ ಬೆಳೆದರು.

1980ರ ದಶಕದ ಒಂದು ಸಿನಿಮಾ ಹಾಡಿನ ರೆಕಾರ್ಡಿಂಗ್ ಸಮಯ, ಆ ಹಾಡಿನಲ್ಲಿ ಒಂದು ಸಣ್ಣ ಮಗುವಿನ ಧ್ವನಿ, ಒಬ್ಬಳು ವಯಸ್ಸಾದ ಅಜ್ಜಿಯ ಧ್ವನಿ, ಮತ್ತು ಒಬ್ಬ ಹುಡುಗನ ಧ್ವನಿ ಬೇಕಾಗಿತ್ತು! ಸಂಗೀತ ನಿರ್ದೇಶಕರು ಮೂರು ಜನ ಬೇರೆ ಬೇರೆ ಗಾಯಕರನ್ನ ಕರೆಯೋಣ ಅಂತ ಯೋಚಿಸುತ್ತಿದ್ದಾಗ ಜಾನಕಿ ಅವರು ಮೆಲ್ಲನೆ ಬಂದು ಹೇಳ್ತಾರೆ–"ಯಾರನ್ನೂ ಕರೆಯೋದು

**ಗೌರವ-ಪ್ರಶಸ್ತಿಗಳು**

-ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (2014)

-ಗೌರವ ಡಾಕ್ಟರೇಟ್-ಮೈಸೂರು ವಿಶ್ವವಿದ್ಯಾಲಯ (2009)

-4 ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು ಹಾಗೂ ಹಲವು ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಗಳು

-ತಮಿಳುನಾಡು ಸರ್ಕಾರದ ಕಲೈಮಾಮಣಿ ಪ್ರಶಸ್ತಿ

**ಎಸ್. ಜಾನಕಿಯವರ ಜನಪ್ರಿಯ ಕನ್ನಡ ಗೀತೆಗಳು**

* ಪೂಜಿಸಲೆಂದೇ ಹೂಗಳ ತಂದೆ-(ರಾಜ್‌ಕುಮಾರ್ ಅವರ ನೆಚ್ಚಿನ ಹಾಡು ಕೂಡ)
* ಆಡೋಣ ಬಾ ಬಾ ಗೋಪಾಲ
* ನಂಬಿದೆ ನಿನ್ನ ನಾದದೇವತೆ
* ಶಿವ ಶಿವ ಎನ್ನದ ನಾಲಿಗೆಯೇಕೆ-ಹೇಮಾವತಿ (1977); ಜಾನಕಿಯವರೇ "ನನ್ನ ವೃತ್ತಿಜೀವನದ ಅತ್ಯಂತ ಕಠಿಣ ಹಾಡು" ಎಂದ ಗೀತೆ
* ತೋರೆಲೆ ನೀ ಪ್ರಿಯನಾ (ಕಠಾರಿ ವೀರ)
* ಉಡುಗೊರೆಯೊಂದ ತಂದ
* ಇಂದು ಎನಗೆ ಗೋವಿಂದ
* ಕರೆದರೂ ಕೇಳದೆ
* ಆಲಿಸು ಓ ಇನಿಯ
* ಶರಣು ವಿರೂಪಾಕ್ಷ
* ಕನಸಲ್ಲಿ ಬಂದವನಾರೆ
* ಪ್ರೇಮಲೋಕದಿಂದ-ಪ್ರೇಮಲೋಕ (1987); ಹಂಸಲೇಖ
* ಮದುವೆ ಮದುವೆ-ಬಂಗಾರದ ಹೂವು (1967); ರಾಜನ್-ನಾಗೇಂದ್ರ
* ಚೆನ್ನರಸಿ ಚೆಲುವರಸಿ (ಪಿ. ಲೀಲಾ ಅವರ ಜೊತೆ)
* ನೀ ನಡಿವ ಹಾದಿಯಲ್ಲಿ-(ಪಿ. ಸುಶೀಲಾ ಅವರ ಜೊತೆ)
* ಆಸೆ ಹೇಳುವಾಸೆ-(ಪಿ. ಸುಶೀಲಾ ಅವರ ಜೊತೆ)
* ತೆರೆದಿದೆ ಮನೆ ಓ ಬಾ ಅತಿಥಿ-(ವಾಣಿ ಜಯರಾಂ ಅವರ ಜೊತೆ)
* ಚಂದ್ರಮುಖಿ ಪ್ರಾಣಸಖಿ-(ಬೆಂಗಳೂರು ಲತಾ ಅವರ ಜೊತೆ)
* ತಂ ನಂ ತಂ ನಂ-(ಪಿ.ಬಿ. ಶ್ರೀನಿವಾಸ್ ಅವರ ಜೊತೆ)
* ಹಾಯಾಗಿದೆ ಈ ದಿನ-(ಪಿ.ಬಿ. ಶ್ರೀನಿವಾಸ್ ಅವರ ಜೊತೆ)
* ಕಣ್ಣು ರೆಪ್ಪೆ ಒಂದನೊಂದು-(ಪಿ.ಬಿ. ಶ್ರೀನಿವಾಸ್ ಅವರ ಜೊತೆ)
* ಒಂದೇ ಒಂದು ಹೊಸ ಹಾಡು-(ಪಿ.ಬಿ. ಶ್ರೀನಿವಾಸ್ ಅವರ ಜೊತೆ)
* ಕಣ್ಣುಗಳು ಕಮಲಗಳು-(ಪಿ.ಬಿ. ಶ್ರೀನಿವಾಸ್ ಅವರ ಜೊತೆ)
* ಗಗನದಲಿ ಮುಗಿಲಾನೇರಿ-ಮಹಿಷಾಸುರ ಮರ್ದಿನಿ (1959); ಜಿ.ಕೆ. ವೆಂಕಟೇಶ್ (ಕನ್ನಡದ ಮೊದಲ ಹೆಜ್ಜೆ)

ಬೇಡ ಸರ್, ಆ ಮೂರೂ ಧ್ವನಿಯನ್ನ ನಾನೇ ಹಾಡ್ತೀನಿ!" ಅಂತ. ಆಗ ಸ್ಟುಡಿಯೋದಲ್ಲಿದ್ದವರಿಗೆಲ್ಲಾ ಶಾಕ್! ಆದರೆ ಮೈಕ್ ಮುಂದೆ ನಿಂತ ಜಾನಕಿ ಆ ಮೂರೂ ಧ್ವನಿಗಳಲ್ಲಿ ಎಷ್ಟೊಂದು ಪರ್ಫೆಕ್ಟ್ ಆಗಿ ಹಾಡಿದರೆಂದರೆ ರೆಕಾರ್ಡಿಂಗ್ ಮುಗಿದ ಮೇಲೆ ಇಡೀ ಭಾರತೀಯ ಚಿತ್ರರಂಗವೇ ಆಕೆಯ ಪ್ರತಿಭೆಗೆ ತಲೆಬಾಗಿತ್ತು.

ಸಾಮಾನ್ಯವಾಗಿ ಕೇಂದ್ರ ಸರ್ಕಾರದಿಂದ ಅತ್ಯುತ್ತಮ ನಾಗರಿಕ ಪ್ರಶಸ್ತಿಯಾದ 'ಪದ್ಮಭೂಷಣ' ಪ್ರಶಸ್ತಿ ಕೊಡುವಾಗ ಎಂಥವರಾದರೂ ಓಡೋಡಿ ಹೋಗಿ ಸ್ವೀಕರಿಸುತ್ತಾರೆ. ಆದರೆ 2013ರಲ್ಲಿ ದೆಹಲಿಯಿಂದ ಜಾನಕಿ ಅವರಿ ಫೋನ್ ಬಂದು "ಅಮ್ಮಾ... ನಿಮಗೆ ಪದ್ಮಭೂಷಣ ಪ್ರಶಸ್ತಿ ಘೋಷಣೆ ಮಾಡಿದ್ದೀವಿ" ಅಂದಾಗ, ಜಾನಕಿ ಅವರು ಕೊಟ್ಟ ಉತ್ತರ, "ನನಗೆ ನಿಮ್ಮ ಈ ಪ್ರಶಸ್ತಿ ಬೇಡ. ದಕ್ಷಿಣ ಭಾರತದ ಕಲಾವಿದರನ್ನ ದೆಹಲಿ ಯಾವಾಗಲೂ ಕಡೆಗಣಿಸುತ್ತದೆ. 56 ವರ್ಷಗಳ ಕಾಲ 40,000ಕ್ಕೂ ಹೆಚ್ಚು ಹಾಡುಗಳನ್ನ ಹಾಡಿದ ಬಳಿಕ ಈಗ ಪದ್ಮಭೂಷಣ ಕೊಡ್ತಿದ್ದೀರಾ? ನನ್ನ ಆತ್ಮಗೌರವ ನನಗೆ ಮುಖ್ಯ, ನಿಮ್ಮ ಪ್ರಶಸ್ತಿಯಲ್ಲ!" ಅಂತ ನೇರವಾಗಿ ಹೇಳಿ ಪ್ರಶಸ್ತಿಯನ್ನೇ ತಿರಸ್ಕರಿಸಿದ ಧೀಮಂತ ಮಹಿಳೆ ಆಕೆ. ದಕ್ಷಿಣ ಭಾರತದ ಕಲಾವಿದರ ಪರವಾಗಿ ದೆಹಲಿಯ ಮುಂದೆ ನಿಂತ ಆಕೆಯ ದಿಟ್ಟ ನಡೆ ಮೆಚ್ಚುವಂತಹದ್ದು.

ಜಾನಕಿ ಅಮ್ಮ ಕನ್ನಡ ಹಾಡು ರೆಕಾರ್ಡಿಂಗ್ ಇದ್ದಾಗ ಒಂದು ದಿನ ಮುಂಚೆಯೇ ಸಾಹಿತ್ಯ ಬರೆಸ್ಕೊಂಡು, ಪ್ರತಿಯೊಂದು ಒತ್ತಕ್ಷರ, ದೀರ್ಘವನ್ನ ರಾತ್ರಿಯೆಲ್ಲಾ ಕುಳಿತು ಅಭ್ಯಾಸ ಮಾಡ್ತಿದ್ರು. ಒಮ್ಮೆ ಡಾ. ರಾಜ್‌ಕುಮಾರ್ ಅವರ ಜೊತೆ ಹಾಡೋವಾಗ, ಜಾನಕಿ ಅಮ್ಮನ ಸ್ಪಷ್ಟವಾದ ಕನ್ನಡ ಉಚ್ಚಾರಣೆ ನೋಡಿ ಅಣ್ಣಾವ್ರೇ ದಂಗಾಗಿ ಹೋದರಂತೆ. "ಅಮ್ಮಾ... ನಾವು ಕನ್ನಡಿಗರೇ ಕೆಲವೊಮ್ಮೆ ತಪ್ಪು ಮಾಡ್ತೀವಿ, ಆದ್ರೆ ನೀವು ಪರರಾಜ್ಯದವರಾಗಿದ್ರೂ ಕನ್ನಡದ ಸೊಗಡನ್ನ ನಮ್ಮಂತೆಯೇ ನರನರದಲ್ಲೂ ಇಳಿಸ್ಕೊಂಡಿದ್ದೀರಾ" ಅಂತ ಎರಡು ಕೈಮುಗಿದು ನಮಸ್ಕರಿಸಿದರಂತೆ!

ಜಾನಕಿ ಅವರಿಗೆ ಒಬ್ಬನೇ ಮಗ ಮುರಳಿಕೃಷ್ಣ. ಅವರಿಗೆ ಚೆನ್ನೈನಲ್ಲೋ, ಹೈದರಾಬಾದ್‌ನಲ್ಲೋ ಸೆಟಲ್ ಆಗಬಹುದಿತ್ತು. ಆದರೆ ಜಾನಕಿ ಅವರು ಮಗನಿಗೆ ಹೇಳಿದ್ದು-"ನನ್ನನ್ನ ಪ್ರೀತಿಯಿಂದ ಸಾಕಿದ್ದು, ನನಗೆ ಅನ್ನ ಹಾಕಿದ್ದು ಕರ್ನಾಟಕ. ನಾವು ಮೈಸೂರಿನಲ್ಲೇ ಒಂದು ಮನೆ ಮಾಡ್ಕೊಂಡು ಇರೋಣ" ಅಂತ ! ಆ ಕಾರಣಕ್ಕಾಗಿಯೇ ಆಕೆ ತನ್ನ ಕೊನೆಯ ದಿನಗಳನ್ನ ಮೈಸೂರಿನ ಶಾಂತ ಪರಿಸರದಲ್ಲಿ ಕಳೆದು, ಕನ್ನಡಿಗರ ಪ್ರೀತಿಯ ಮಡಿಲಲ್ಲೇ ಕಣ್ಣು ಮುಚ್ಚಿದರು.

ಜಾನಕಿಯವರ ದನಿ ಕೇವಲ ಧ್ವನಿಯಲ್ಲ; ಅದೊಂದು ಭಾವಸಾಗರ. ಬದುಕಿನ ಜವಾಬ್ದಾರಿಗಳಲ್ಲಿ ನೊಂದು-ಬೆಂದು ಮನಸ್ಸು ಅಶಾಂತಿಯಿಂದ ಬಳಲುತ್ತಿರುವಾಗ, ಒಂಟಿತನ ಕಾಡುತ್ತಿರುವಾಗ ತಮ್ಮ ಒಂದೇ ಒಂದು ಹಾಡಿನಿಂದ, ಕಂಠದ ಅಮೃತದಿಂದ ಮನಸ್ಸನ್ನು ಸಂತೈಸಿದ ತಾಯಿ ಅವರು. ನಾವು ಅತ್ತಾಗ ನಮ್ಮ ಕಣ್ಣೀರು ಒರೆಸಿದ್ದು ಅದೇ ಧ್ವನಿ, ನಾವು ಸೋತಾಗ ಬೆನ್ನು ತಟ್ಟಿದ್ದು ಅದೇ ಧ್ವನಿ, ರಾತ್ರಿ ನಿದ್ದೆ ಬರದೇ ಒದ್ದಾಡಿದಾಗ ತಾಯಿಯಂತೆ ಜೋಗುಳ ಹಾಡಿ ನಮ್ಮನ್ನ ಮಲಗಿಸಿದ್ದು ಅದೇ ಧ್ವನಿ !.

ಅವರ ದನಿ ಕನ್ನಡಿಗರ ಹೃದಯದಲ್ಲಿ ಅಜರಾಮರವಾಗಿರುತ್ತದೆ. ಜಾನಕಿಯವರು ಹಾಡಿದ ಪ್ರತಿಯೊಂದು ಗೀತೆ ಈ ನಾಡಿಗೆ ಅವರು ಬಿಟ್ಟುಹೋದ ಅಪೂರ್ವವಾದ ಕೊಡುಗೆ. ಅವರ ಚಿರಂತನ ಧ್ವನಿಗೆ ಕನ್ನಡ ನಾಡಿನ ಕೃತಜ್ಞತಾಪೂರ್ವಕ ಗೌರವ. ನಮ್ಮ ಕಣ್ಣಮುಂದಿದ್ದು ಈಗ ಮರೆಯಾದ ಆ ಸ್ವರ ಸರಸ್ವತಿಯ ರೂಪಕ್ಕೆ ಭಾವಪೂರ್ಣ ಶ್ರದ್ಧಾಂಜಲಿ.❑

***ರೇಣುಕಾ ನಿಡಗುಂದಿ***

## ಸ್ವರಸಾಮ್ರಾಜ್ಯದ ಅಮ್ಮ ಎಸ್. ಜಾನಕಿ

1938 ರಲ್ಲಿ ಇಂದಿನ ದಕ್ಷಿಣ ಭಾರತದ ಆಂಧ್ರ ಪ್ರದೇಶದಲ್ಲಿ ಜನಿಸಿದ ಇವರು ಬಹುತೇಕ ದಕ್ಷಿಣಭಾರತವನ್ನು ಒಳಗೊಂಡಂತೆ 17 ಭಾಷೆಗಳಲ್ಲಿ ಚಲನಚಿತ್ರ ಗೀತೆಗಳನ್ನು ಹಾಗು ಇತರೆ ಗಾಯನಗಳನ್ನು ಹಾಡುವ ಮೂಲಕ ಭಾರತದಾದ್ಯಂತ ಜನಪ್ರಿಯರು. ಮನತುಂಬಿಗೊಳ್ಳುವಂತಹ ಹಾಡುಗಳನ್ನು ಹಾಡಿ ರಂಜಿಸಿದ್ದಾರೆ.

ಅಮ್ಮ ಲತಾಮಂಗೇಷ್ಕರ ಅವರ ತರುವಾಯ ದೇಶಕಂಡಂತಹ ಅಪ್ರತಿಮ ಗಾಯಕಿ ಜಾನಕಿ ಅಮ್ಮರವರು. ಮೂಲತಃ ಯಾವುದೇ ಶಾಸ್ತ್ರೀಯ ಸಂಗೀತವನ್ನು ಕಲಿಯದ ಇವರದು ಮೇರು ಸಾಧನೆ. ಎಷ್ಟೇ ಕಷ್ಟಕರವಾದಂತಹ ಹಾಡುಗಳನ್ನು ಕೂಡ ತಮ್ಮ ಶ್ರದ್ಧೆ ಹಾಗೂ ನಿಷ್ಠೆಯ ಮೂಲಕವೇ ಹಾಡಿ ಅಮರಗೊಳಿಸಿದ್ದಾರೆ. ತಮ್ಮ ಸುಮಧುರ ಕಂಠದ ಗಾನಮಾಧುರ್ಯವನ್ನು ದೇಶದ ಅಭಿಮಾನಿಗಳಿಗೆ ನೀಡುತ್ತಾ ಬಂದ ಅಮ್ಮ ಜಾನಕಿಯವರು ದಿನಾಂಕ 11.07.2026 ರಂದು ಇಹಲೋಕ ತ್ಯಜಿಸಿದರು. ಅವರ ಇಚ್ಛೆಗೆ ಅನುಸಾರವಾಗಿ ಅವರು ನೆಲೆಸಿದ್ದಂತಹ ಮೈಸೂರಿನಲ್ಲಿ ಅಂತ್ಯಸಂಸ್ಕಾರ ಮಾಡಲಾಯಿತು. ಅಪಾರ ಅಭಿಮಾನಿ ಬಳಗಕ್ಕೆ ಇನ್ನಿಲ್ಲದಂತಹ ನೋವನ್ನು ಕೊಟ್ಟು ನಮ್ಮಿಂದ ದೂರವಾದಂತಹ ಅಮ್ಮ ಜಾನಕಿಯವರಿಗೆ ಕಣ್ಣೀರಿನ ವಿದಾಯ. ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುತ್ತೇನೆ.❑

***ನಟರಾಜ್ ಸಿ.***

ಸಂಗೀತ ಸಮುದ್ರದ ಅಲೆ ಅಲೆಗಳಲಿ ಶಬ್ದಗಳ ಮಾಲೆ, ಲಯ ಭಾವ ತುಂಬಿದ ಸಾಮ್ರಾಜ್ಞಿ, ಮೋಡಿ ಮಾಡುವ ಸ್ವರ ಲಯಗಳ ಮಾಧುರ್ಯದ ಆಲಿಂಗನ.

ಸ್ವರಗಳಲಿ ಜೀವ, ಕರ್ಣ ನಾಡಿಗಳಲಿ ಅರಳುವ ಕಂಪನ ಸದಾ ಭಾರತೀಯರ ಮನಗಳಲಿ ನಿನ್ನ ಗಾನ ಸುಧೆ ಅಜರಾಮರ, ಸದಾ ಸ್ವರಗಳ ಮಾಯೆಯಲಿ ನಮ್ಮನ್ನು ಮೀಯಿಸುವ ಜಾನಕಿ ಅಮ್ಮ ನಿನಗೆ ಕೋಟಿ ಕೋಟಿ ನಮನ. ❑

***ಜಯಶ್ರೀ ಬಸವರಾಜು ಬಿ.ಕೆ.***

ನುಡಿನಮನ

# ಸ್ವರಸಾಧ್ವಿ ಜಾನಕಿ

ಗಾನಕೋಗಿಲೆ ಜಾನಕಮ್ಮ ಕನ್ನಡ ಮಣ್ಣಿನೊಂದಿಗೆ ನಿಮ್ಮ ನಂಟು ಪ್ರಾರಂಭವಾಗಿದ್ದು 1957–58 ರಲ್ಲಿ. 1959 ರ 'ಮಹಿಷಾಸುರ ಮರ್ದಿನಿ' ಚಿತ್ರದ "ಗಗನದಲ್ಲಿ ಮುಗಿಲಾ ನೇರಿ" ಹಾಡಿನ ಮೂಲಕ ಕನ್ನಡಿಗರ ಹೃದಯ ಮಂಟಪವನ್ನೇರಿದಿರಿ ನೀವು. ಅಲ್ಲಿಂದ ಪ್ರಾರಂಭವಾದ ನಿಮ್ಮ ಗಾಯನದ ಪಯಣ ಸರಿಸುಮಾರು 60 ವರ್ಷಗಳ ಕಾಲ ನಿರಂತರವಾಗಿ ಕನ್ನಡ, ತೆಲುಗು, ತಮಿಳು, ಮಲಯಾಳಂ, ಹಿಂದಿ ಭಾಷೆಗಳನ್ನೊಳಗೊಂಡು 18 ಕ್ಕೂ ಹೆಚ್ಚು ಭಾಷಿಗರ ಕಿವಿಗಳಿಗೆ ಅಮೃತಧಾರೆಯನ್ನು ಉಣಿಸಿದಿರಿ.

ಎಲ್ಲಾ ಭಾಷೆಗಳಲ್ಲಿ ಹಾಡಿದ ಒಟ್ಟು ಹಾಡು 48 ಸಾವಿರಕ್ಕೂ ಹೆಚ್ಚು! ಅದರಲ್ಲೂ ಅತಿ ಹೆಚ್ಚು ಹಾಡಿದ್ದು ಕನ್ನಡದಲ್ಲೇ. ನಂತರದ ಸ್ಥಾನದಲ್ಲಿ ಮಲಯಾಳಂ ಬರುತ್ತದೆ. ಅಷ್ಟರ ಮಟ್ಟಿಗೆ ಕನ್ನಡಿಗರು ನಿಮ್ಮನ್ನು ತಮ್ಮ ಹೆತ್ತಮ್ಮನಂತೆ ತಲೆಯ ಮೇಲೆ ಹೊತ್ತು ನಲಿದು ಗೌರವಿಸಿದ್ದಾರೆ. 1938 ರ ಏಪ್ರಿಲ್ 23 ರಂದು ಆಂಧ್ರಪ್ರದೇಶದ ಗುಂಟೂರಿನಲ್ಲಿ ಜನಿಸಿದ ನೀವು, ಸಂಗೀತ ಸಾಧ್ವಿಯಂತೆ ಕೊನೆಯವರೆಗೂ ಬಾಳಿ ಬದುಕಿದ್ದು ಮೈಸೂರಿನಲ್ಲಿ. ಮೈಸೂರಿನ ಮಣ್ಣಿನಲ್ಲಿ ಹುದುಗಿರುವ ಸಂಗೀತದ ಸೊಗಡು ನಿಮ್ಮನ್ನು ಅಷ್ಟರ ಮಟ್ಟಿಗೆ ಆಕರ್ಷಿಸಿತ್ತು. ಕನ್ನಡದ ಸುಪ್ರಸಿದ್ಧ ಸಂಗೀತ ನಿರ್ದೇಶಕರಾದ ಜಿ.ಕೆ. ವೆಂಕಟೇಶ್, ರಾಜನ್–ನಾಗೇಂದ್ರ, ಟಿ.ಜಿ. ಲಿಂಗಪ್ಪ, ವಿಜಯ್ ಭಾಸ್ಕರ್, ಉಪೇಂದ್ರ ಕುಮಾರ್, ಎಂ. ರಂಗರಾವ್, ಇಳಯರಾಜ, ಹಂಸಲೇಖ ಇವರೆಲ್ಲರಿಗೂ ಪ್ರಿಯವಾಗಿದ್ದ ಧ್ವನಿ ತಮ್ಮದಾಗಿತ್ತು.

ನೀವು ಹಾಡಿದ ಎಲ್ಲಾ ಹಾಡುಗಳು ಜನಪ್ರಿಯತೆಯನ್ನು ಗಳಿಸಿವೆ. ಒಂದೇ ಒಂದು ಹಾಡನ್ನು ಮರೆಯುವಂತಿಲ್ಲ, ತಳ್ಳಿಹಾಕುವಂತಿಲ್ಲ, ಅಷ್ಟರ ಮಟ್ಟಿಗೆ ಶ್ರುತಿಬದ್ಧ, ತಾಳಬದ್ಧ ನಿಮ್ಮ ಕಂಠಸಿರಿ. ಕನ್ನಡದ ಮೇರುನಟ ಡಾ. ರಾಜ್‌ಕುಮಾರ್ ಅವರ ಅತಿ ನೆಚ್ಚಿನ ಹಾಡು "ಪೂಜಿಸಲೆಂದೆ ಹೂವುಗಳ ತಂದೆ ದರುಶನ ಕೋರಿ ನಾನಿಂದೆ ತೆರೆಯೋ ಬಾಗಿಲನು" ಹಾಡು ಕೇಳುಗರಿಗೆ ಹೃದಯಾಂತರಾಳದ ಮೊರೆಯಂತೆ ಭಾಸವಾಗುವಷ್ಟರ ಮಟ್ಟಿಗೆ ಭಾವುಕರನ್ನಾಗಿಸಿರುವುದು ನಿಮ್ಮ ಧ್ವನಿಯ ಭಾವ ತರಂಗದಿಂದಲೇ. "ನಂಬಿದೆ ನಿನ್ನ ನಾದ ದೇವತೆಯೇ" ಹಾಡು ಸಂಗೀತದ ಗಂಧಗಾಳಿಯೂ ಇಲ್ಲದವರಿಗೆ ನಾದ ದೇವತೆಯ ದರ್ಶನವನ್ನು ನೀಡಲು ಶಕ್ತವಾಗಿದ್ದು ನಾದ ದೇವತೆಯ ಆರಾಧನೆಯನ್ನು ಜೀವನದುದ್ದಕ್ಕೂ ಮಾಡಿದ ನಿಮ್ಮ ಗಾನ ಗಾರುಡಿಯಿಂದಲೇ.

ನೀವು ಹಾಡಿದ "ಶಿವ ಶಿವ ಎನ್ನದ ನಾಲಿಗೆಯೇಕೆ", "ಇಂದು ಎನಗೆ ಗೋವಿಂದ", "ಕರೆದರೂ ಕೇಳದೆ ಶರಣು ವಿರೂಪಾಕ್ಷ" ಇತ್ಯಾದಿ ಹಾಡುಗಳು ಭಕ್ತಿಯ ಪರಾಕಾಷ್ಠೆಗೆ ನಿದರ್ಶನಗಳಾಗಿದ್ದರೆ, "ಕನಸಲ್ಲಿ ಬಂದವನಾರೇ", "ಆಸೆ ಹೇಳುವ ಆಸೆ", "ತೆರೆದಿದೆ ಮನೆ ಓ ಬಾ ಅತಿಥಿ" ಇತ್ಯಾದಿ ಹಾಡುಗಳು ಭಾವಿ ನಲ್ಲನ ಕುರಿತು ಹೇಳಲಾಗದ ಹೃದಯಾಂತರಾಳದ ಭಾವನೆಗಳನ್ನು ನವಿರಾಗಿ ಹೇಳುವ ಗೀತೆಗಳಾಗಿಬಿಟ್ಟಿವೆ. 'ಪ್ರೇಮಲೋಕ'ದಿಂದ ಬಂದ ಪ್ರೇಮದ ಸಂದೇಶ "ತಂ ನಂ ತಂ ನಂ", "ಹಾಯಾಗಿದೆ ಈ ದಿನ", "ಚಂದ್ರಮುಖಿ ಪ್ರಾಣಸಖಿ" ಇತ್ಯಾದಿ ಹಾಡುಗಳು ತಾವು



ಎಲ್ಲಾ ವಯೋಮಾನದವರ ಎಲ್ಲಾ ಭಾವನೆಗಳನ್ನು ಸಮರ್ಥವಾಗಿ ಜನಮಾನಸದಲ್ಲಿ ಅಚ್ಚೊತ್ತುವಂತೆ ಮಾಡಿದ ಸ್ವರ ಸಾಮ್ರಾಜ್ಞಿ ಎಂಬುದನ್ನು ಎಲ್ಲಿಯವರೆಗೆ ಕನ್ನಡ ಭಾಷೆ ಇರುವುದೋ ಅಲ್ಲಿಯವರೆಗೆ ಸಾರಿ ಹೇಳುತ್ತಲೇ ಇರುತ್ತವೆ.

ನಿಮ್ಮ ಧ್ವನಿ ಬರೀ ಇಂಪಲ್ಲ, ಅದರಲ್ಲಿದೆ ಕನ್ನಡದ ಕಂಪು. ಕನ್ನಡತಿಯಲ್ಲದಿದ್ದರೂ ನೀವು ಕನ್ನಡ ಚಲನಚಿತ್ರ ಗೀತೆಗಳ ಮೂಲಕ ಕನ್ನಡಿಗರ ಹೃದಯ ಸಾಮ್ರಾಜ್ಯದಲ್ಲಿ ಎಂದೆಂದಿಗೂ ಚಿರಸ್ಥಾನ ಉಳಿಸಿಕೊಂಡಿದ್ದೀರಿ. ನಿಮ್ಮ ಧ್ವನಿ ಬರೀ ಸ್ವರವಾಗಿ ಉಳಿಯುವುದಿಲ್ಲ, ಅದೊಂದು ಭಾವಸಾಗರವಾಗಿ ಪ್ರತಿಯೊಬ್ಬರ ಮನದಾಳದಲ್ಲಿ ಬತ್ತದ ಬುಗ್ಗೆಯಾಗಿ ಸದಾ ಇರಲಿದೆ ಎಂಬುದಕ್ಕೆ ಇತ್ತೀಚಿನ ಸಾಮಾಜಿಕ ಮಾಧ್ಯಮಗಳ ವಾಹಿನಿಗಳಲ್ಲಿ ನಿಮ್ಮ ಹಾಡುಗಳನ್ನು ಕೇಳುವವರ ಸಂಖ್ಯೆಯನ್ನು ನೋಡಿದಾಗಲೇ ತಿಳಿಯುತ್ತದೆ.

ರೇಡಿಯೋ, ಟಿವಿ, ಸಿನಿಮಾ ಪರದೆಗಳಲ್ಲಿ ಈಗಾಗಲೇ ಕೋಟ್ಯಾಂತರ ಜನರು ನಿಮ್ಮ ಧ್ವನಿಗೆ ಮನಸೋತಿದ್ದಾರೆ. ಇನ್ನು ಮುಂದೆಯೂ ಕೂಡ ಅದು ಯಾವುದೇ ಹೊಸ ಪ್ರಕಾರದ ಮಾಧ್ಯಮ ಇರಲಿ, ಬರಲಿ, ನಿಮ್ಮ ಹಾಡುಗಳನ್ನು ಕೇಳುವ, ಆಸ್ವಾದಿಸುವವರ ಸಂಖ್ಯೆ ಹೆಚ್ಚುತ್ತಲೇ ಹೋಗುವುದು ನಿಶ್ಚಿತ. ನಿಮ್ಮ ಹಾಡುಗಳನ್ನು ಕೇಳುವುದೆಂದರೆ ಜೀವನದ ಪ್ರತಿಯೊಂದು ಭಾವವನ್ನು ಅನುಭವಿಸಿದಂತೆ, ಆದ್ದರಿಂದಲೇ ಅದು ಬತ್ತದ ಭಾವಸಾಗರ.

ಎಸ್. ಜಾನಕಿ ಎಂದರೆ ಸಿಸ್ಲಾ ಶ್ರೀರಾಮಮೂರ್ತಿ ಜಾನಕಿ ಎಂಬುದು ಹಲವರಿಗೆ ತಿಳಿದಿರಲಿಕ್ಕಿಲ್ಲ, ಆದರೆ ಎಸ್. ಜಾನಕಿ ಎಂದರೆ ಸ್ವರ ಸರಸ್ವತಿ ಜಾನಕಿ ಎಂದು ತಿಳಿದವರೇ ಹೆಚ್ಚು, ಯಾವ ಪ್ರಕಾರದ ಹಾಡಿಗೂ ಯೆಸ್! ಅಷ್ಟರ ಮಟ್ಟಿಗೆ ಜನಜನಿತ ನಿಮ್ಮ ಹೆಸರು. ನಿಮ್ಮ ಸೇವೆಯನ್ನು ಕನ್ನಡಿಗರು ಮರೆಯಲುಂಟೇ ಜಾನಕಮ್ಮ?

33 ರಾಜ್ಯ ಚಿತ್ರ ಪ್ರಶಸ್ತಿಗಳು, 2009 ರಲ್ಲಿ ಮೈಸೂರು ವಿಶ್ವವಿದ್ಯಾಲಯ ನಿಮಗೆ ಗೌರವ ಡಾಕ್ಟರೇಟ್ ನೀಡಿದೆ, ಸರ್ಕಾರ 2014 ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ, ಹಲವು ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಗಳು, 4 ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು ಹಾಗೂ ಇನ್ನೂ ಹಲವಾರು ಪ್ರಶಸ್ತಿಗಳನ್ನು ಪಡೆಯುವ ಮೂಲಕ ಗೌರವಿಸಲ್ಪಟ್ಟ ನೀವು 2013 ರಲ್ಲಿ ಕೇಂದ್ರ ಸರ್ಕಾರ ನೀಡಲು ಮುಂದಾದ ಪದ್ಮಭೂಷಣ ಪ್ರಶಸ್ತಿಯನ್ನು ದಕ್ಷಿಣ ಭಾರತದ ಗಾಯಕರಿಗೆ ಸಲ್ಲಬೇಕಾದ ಗೌರವ ತಡವಾಗಿದೆ ಎಂಬ ಕಾರಣಕ್ಕೆ ವಿನಮ್ರವಾಗಿ ನಿರಾಕರಿಸುವ ಮೂಲಕ ಸ್ವಾಭಿಮಾನವನ್ನು ತೋರಿದಿರಿ!

ಜುಲೈ 11, 2026 ರಂದು ಮೈಸೂರಿನಿಂದ ಗಂಧರ್ವ ಲೋಕಕ್ಕೆ ಪಯಣಿಸಿದ ನಿಮ್ಮ ಆತ್ಮ ಬಹುಶಃ ಸುಮನ್ ಕಲ್ಯಾಣ್‌ಪುರ್, ಆಶಾ ಭೋಸ್ಲೆ ಅವರೊಂದಿಗೆ ಸೇರಿ ಒಂದು ಸಂಗೀತ ವೃಂದವನ್ನು ರಚಿಸಿ ಸರಸ್ವತಿಯ ಆರಾಧನೆಯಲ್ಲಿ ನಿರತವಾಗಿರಬಹುದೇ?

ಮರಳಿ ಯಾವಾಗ ಬರುವಿರಿ ನಮ್ಮ ಕನ್ನಡ ನಾಡಿಗೆ? ಕನ್ನಡ ನಾಡಿಗೆ ಮರಳಿ ಬರುವಿರೆಂಬ ಆಶಯದೊಂದಿಗೆ ನಿಮ್ಮ ಹಾಡುಗಳನ್ನು ಆಲಿಸುತ್ತಾ ನಿಮಗೆ ಕಣ್ಣಾಲಿಗಳ ಮೂಲಕ ಶ್ರದ್ಧಾಂಜಲಿ ಸಲ್ಲಿಸುತ್ತಿರುವ ನಿಮ್ಮ ಅಭಿಮಾನಿಗಳು.❑

***ಸಂತೋಷ್ ಕುಮಾರ್ ಉಪಾಧ್ಯಾಯ***


## ಓದುಗರ ಅನಿಸಿಕೆ

ಏಪ್ರಿಲ್, ಮೇ ಮತ್ತು ಜೂನ್ 2026ರ ಅಭಿಮತ ಸಂಚಿಕೆಗಳನ್ನು ಓದಿದೆ. ನೂತನ ಸಂಪಾದಕ ಮಂಡಳಿ ಹಾಗು ಪ್ರಧಾನ ಸಂಪಾದಕಿಯವರಾದ ಶ್ರೀಮತಿ ರೇಣುಕಾ ನಿಡಗುಂದಿ ಅವರ ಸಾರಥ್ಯದಲ್ಲಿ ಈ ಮೂರೂ ಸಂಚಿಕೆಗಳು ಬಹಳ ಆಕರ್ಷಕವಾಗಿ ಹೊರಬಂದಿವೆ. ಅರ್ಥಪೂರ್ಣವಾದ ಸಂಪಾದಕೀಯ ಮೆಚ್ಚುವಂತಹದ್ದಾಗಿದೆ. ಮುಖಪುಟ ಮತ್ತು ಹಿಂಬದಿ ಪುಟಗಳು ಉತ್ತಮ ಛಾಯಾಚಿತ್ರ ಹಾಗು ಶೀರ್ಷಿಕೆಗಳಿಂದ ಮನ ಸೆಳೆಯುತ್ತವೆ. ಲೇಖನಗಳು ಹಾಗೂ ಕಾರ್ಯಕ್ರಮ ವರದಿಗಳು ಸುಂದವಾಗಿ ಮೂಡಿ ಬಂದಿದ್ದು 'ಅಭಿಮತ'ದ ಮೆರುಗನ್ನು ಹೆಚ್ಚಿಸಿವೆ.

ಉತ್ತಮ ಅನುಭವ ಮತ್ತು ಅಭಿರುಚಿಯುಳ್ಳ ಸಂಪಾದಕ ಮಂಡಳಿ ಮತ್ತು ಪ್ರಧಾನ ಸಂಪಾದಕರ ಶ್ರಮ ಈ ಸಂಚಿಕೆಗಳಲ್ಲಿ ಅಭಿವ್ಯಕ್ತಗೊಂಡಿರುವುದು ಉಲ್ಲೇಖನೀಯ. ಅಭಿಮತವನ್ನು ಹೊಸತನದಿಂದ 36ನೇ ವರ್ಷದಲ್ಲಿ ಉತ್ತಮವಾಗಿ ಮುಂದುವರಿಸುತ್ತಿರುವ ಅವರಿಗೆ ಹಾಗು ದೆಹಲಿ ಕರ್ನಾಟಕ ಸಂಘದ ನೂತನ ಕಾರ್ಯಕಾರಿ ಸಮಿತಿ ಚುಕ್ಕಾಣಿ ಹಿಡಿದು ಮುನ್ನಡೆಸುತ್ತಿರುವ ಪ್ರಸ್ತುತ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಆರ್ ಹಾಗು ಎಲ್ಲಾ ಪದಾಧಿಕಾರಿಗಳಿಗೆ, ಸದಸ್ಯರಿಗೆ ಅಭಿನಂದನೆಗಳು. ಮುಂದಿನ ಕಾರ್ಯಾವಧಿಗೆ ಹಾರ್ದಿಕ ಶುಭಾಶಯಗಳು.

***ಕೆ. ಶ್ರೀ. ಮೂರ್ತಿ***
ನವದೆಹಲಿ

# ಅಂತರರಾಷ್ಟ್ರೀಯ ಸ್ವಯಂ-ಆರೈಕೆ ದಿನ: ಆರೋಗ್ಯಕರ ಬದುಕಿನ ಮೊದಲ ಹೆಜ್ಜೆ



ಲೇಖಕರು : ರಮ್ಯಾ ಆರ್.ಎಸ್.
**ಚಿಕಿತ್ಸಕಿ**
**ಟ್ರಾಮಾ-ಇನ್‌ಫಾರ್ಮ್ಡ್ ಪ್ರಾಕ್ಟಿಷನರ್**
**ಇಮೇಲ್ :** rrs2397@gmail.com

ಪ್ರತಿ ವರ್ಷ ಜುಲೈ 24ರಂದು ಅಂತರರಾಷ್ಟ್ರೀಯ ಸ್ವಯಂ–ಆರೈಕೆ ದಿನವಾಗಿ ಆಚರಿಸಲಾಗುತ್ತದೆ. ಸ್ವಯಂ–ಆರೈಕೆ ಎಂಬುದು ನಮ್ಮನ್ನು ನಾವು ಕಾಳಜಿಯಿಂದ ನೋಡಿಕೊಳ್ಳುವುದು. ಅದು ಐಷಾರಾಮಿ ಅಲ್ಲ; ಆರೋಗ್ಯಕರ ಬದುಕಿನ ಅನಿವಾರ್ಯ ಭಾಗ ಎಂಬುದನ್ನು ನೆನಪಿಸುತ್ತದೆ. ವೇಗವಾಗಿ ಬದಲಾಗುತ್ತಿರುವ ಇಂದಿನ ಬದುಕಿನಲ್ಲಿ ಕೆಲಸ, ಕುಟುಂಬ, ಶಿಕ್ಷಣ ಮತ್ತು ಸಾಮಾಜಿಕ ಜವಾಬ್ದಾರಿಗಳ ಒತ್ತಡದ ನಡುವೆ ಸ್ವಯಂ–ಆರೈಕೆ ನಮ್ಮ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಭದ್ರ ಅಡಿಪಾಯವಾಗಿದೆ.

ಚಿಕಿತ್ಸಕಿಯಾಗಿ ನನ್ನ ಅನುಭವದಲ್ಲಿ, ಸ್ವಯಂ–ಆರೈಕೆ ಎಂದರೆ ಸ್ವಾರ್ಥ ಅಥವಾ ಸ್ವಸುಖಾಸಕ್ತಿ ಎಂದು ಭಾವಿಸುವವರೇ ಹೆಚ್ಚು. ಆದರೆ ಸತ್ಯ ಅದಕ್ಕೆ ವಿರುದ್ಧವಾಗಿದೆ. ನಮ್ಮನ್ನು ನಾವು ಚೆನ್ನಾಗಿ ನೋಡಿಕೊಂಡಾಗ ಮಾತ್ರ ಬದುಕಿನ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಮಾನಸಿಕ ಸ್ಥೈರ್ಯವನ್ನು ಬೆಳೆಸಿಕೊಳ್ಳಲು, ಸಂಬಂಧಗಳನ್ನು ಆರೋಗ್ಯಕರವಾಗಿ ಉಳಿಸಿಕೊಳ್ಳಲು ಮತ್ತು ಇತರರಿಗೆ ಬೆಂಬಲವಾಗಿ ನಿಲ್ಲಲು ಸಾಧ್ಯ. ಖಾಲಿ ಪಾತ್ರೆಯಿಂದ ಹೇಗೆ ನೀರು ಸುರಿಯಲಾಗುವುದಿಲ್ಲವೋ ಅದೇ ರೀತಿ ನಮ್ಮ ಯೋಗಕ್ಷೇಮವನ್ನು ಕಡೆಗಣಿಸಿ ಇತರರ ಕಾಳಜಿ ವಹಿಸಲಾಗದು.

ಸ್ವಯಂ–ಆರೈಕೆ ಎಂದರೆ ಕೇವಲ ರಜೆ, ಸ್ಪಾ ಅಥವಾ ಮನರಂಜನೆ ಅಲ್ಲ. ಸಾಕಷ್ಟು ನಿದ್ರೆ, ಪೌಷ್ಟಿಕ ಆಹಾರ, ನಿಯಮಿತ ವ್ಯಾಯಾಮ, ಒತ್ತಡದ ಸಮರ್ಪಕ ನಿರ್ವಹಣೆ, ಆರೋಗ್ಯಕರ ಮಿತಿಗಳನ್ನು ಕಾಯ್ದುಕೊಳ್ಳುವುದು, ಅಗತ್ಯವಿದ್ದಾಗ ಭಾವನಾತ್ಮಕ ಬೆಂಬಲ ಪಡೆಯುವುದು ಹಾಗೂ ಆತ್ಮಾವಲೋಕನಕ್ಕೆ ಸಮಯ ನೀಡುವುದು–ಇವೆಲ್ಲವೂ ಅದರ ಅವಿಭಾಜ್ಯ ಭಾಗಗಳಾಗಿವೆ. ಜೀವನದ ಒತ್ತಡ ಸಹಿಸಲಾಗದಂತಾದಾಗ, ಜೀವನ ಭಾರವೆನಿಸತೊಡಗಿದಾಗ ವೃತ್ತಿಪರರ ನೆರವು ಪಡೆಯುವುದೂ ಅಷ್ಟೇ ಸಹಜ ಮತ್ತು ಸ್ವಯಂ ಆರೈಕೆಯ ಮಹತ್ವದ ಅಂಶವಾಗಿದೆ.

ದೊಡ್ಡ ಬದಲಾವಣೆಗಳಿಗೆ ಯಾವಾಗಲೂ ದೊಡ್ಡ ಪ್ರಯತ್ನಗಳೇ ಬೇಕೆಂದಿಲ್ಲ. ಪ್ರತಿದಿನ ಕೆಲ ನಿಮಿಷಗಳ ಏಕಾಗ್ರತೆಯ ಅಭ್ಯಾಸ, ಕೃತಜ್ಞತೆಯ ದಿನಚರಿ, ಮೊಬೈಲ್ ಪರದೆ ಬಳಕೆಗೆ ಮಿತಿ, ಇಷ್ಟದ ಹವ್ಯಾಸಗಳಲ್ಲಿ ತೊಡಗಿಸಿಕೊಳ್ಳುವುದು ಅಥವಾ ಶಾಂತವಾಗಿ ನಡೆದಾಡುವುದು–ಇಂತಹ ಸಣ್ಣ ಅಭ್ಯಾಸಗಳು ಭಾವನಾತ್ಮಕ ಆರೋಗ್ಯವನ್ನು ಗಮನಾರ್ಹವಾಗಿ ಉತ್ತಮಗೊಳಿಸುತ್ತವೆ. ಅಷ್ಟೇ ಮುಖ್ಯವಾಗಿ ನಾವು ಇತರರಿಗೆ ತೋರುವ ದಯೆ ಮತ್ತು ಸಹಾನುಭೂತಿಯನ್ನು ನಮ್ಮ ಮೇಲೂ ತೋರಿಸಿಕೊಳ್ಳುವ ಸ್ವಯಂ–ಕರುಣೆ ಬೆಳೆಸಿಕೊಳ್ಳುವುದು ಅತ್ಯಂತ ಮುಖ್ಯ.

ಅಂತರರಾಷ್ಟ್ರೀಯ ಸ್ವ–ಆರೈಕೆ ದಿನವು ಆರೋಗ್ಯ ಎನ್ನುವುದು ವೈದ್ಯರು ಅಥವಾ ಆರೋಗ್ಯ ವೃತ್ತಿಪರರ ಜವಾಬ್ದಾರಿ ಮಾತ್ರವಲ್ಲ; ಪ್ರತಿಯೊಬ್ಬ ವ್ಯಕ್ತಿಯ ಜವಾಬ್ದಾರಿಯೂ ಹೌದು ಎಂಬುದನ್ನು ಈ ದಿನ ನೆನಪಿಸುತ್ತದೆ. ಸ್ವಯಂ–ಆರೈಕೆಯನ್ನು ವರ್ಷಕ್ಕೊಮ್ಮೆ ನೆನಪಿಸಿಕೊಳ್ಳುವ ವಿಷಯವಾಗಿರಿಸದೆ, ಪ್ರತಿದಿನದ ಜೀವನಶೈಲಿಯ ಭಾಗವಾಗಿಸಿದರೆ ಜೀವನದ ಗುಣಮಟ್ಟವೂ ಉತ್ತಮಗೊಳ್ಳುತ್ತದೆ. ಈ ಅಂತರರಾಷ್ಟ್ರೀಯ ಸ್ವಯಂ–ಆರೈಕೆ ದಿನದಂದು, ತಪ್ಪಿತಸ್ಥ ಭಾವನೆಯಿಲ್ಲದೆ ನಮ್ಮ ಯೋಗಕ್ಷೇಮಕ್ಕೆ ಆದ್ಯತೆ ನೀಡುವ, ನಮ್ಮ ಮನಸ್ಸು ಮತ್ತು ದೇಹದ ಮಾತನ್ನು ಆಲಿಸುವ ಹಾಗೂ ನಮ್ಮನ್ನು ನಾವು ಕಾಳಜಿಯಿಂದ ನೋಡಿಕೊಳ್ಳುವುದೇ ಇತರರನ್ನು ಕಾಳಜಿಯಿಂದ ನೋಡಿಕೊಳ್ಳುವ ಮೊದಲ ಹೆಜ್ಜೆ ಎಂಬ ಅರಿವನ್ನು ಬೆಳೆಸಿಕೊಳ್ಳೋಣ. ಆರೋಗ್ಯವಂತ, ಸಂತೋಷಭರಿತ ಸಮಾಜದ ನಿರ್ಮಾಣವು ಸ್ವತಃ ತಮ್ಮ ಯೋಗಕ್ಷೇಮವನ್ನು ಗೌರವಿಸಿ ಪೋಷಿಸುವ ವ್ಯಕ್ತಿಗಳಿಂದಲೇ ಆರಂಭವಾಗುತ್ತದೆ. ❑

# ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನಲ್ಲಿ ಯೋಗ ದಿನದ ವಿಶೇಷ ಉಪನ್ಯಾಸ



ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಜೂನ್ 17, 2026 ತಿಂಗಳ ಸಭೆ, ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ವಿಶೇಷವಾಗಿತ್ತು. ಈ ಸಂದರ್ಭದಲ್ಲಿ ಪರ್ಯಾಯ ಆರೋಗ್ಯ ಚಿಕಿತ್ಸೆಯ ಅಂಗದಲ್ಲಿ ಆಯುರ್ವೇದದಲ್ಲಿ ಪರಿಣಿತಿ ಹೊಂದಿರುವ ಡಾ. ರಮೇಶ್ ಕುಮಾರ್ ಅಸೋಸಿಯೇಟ್ ಪ್ರೊ. ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಆಯುರ್ವೇದ, ನವದೆಹಲಿ ಇವರನ್ನು ಆಹ್ವಾನಿಸಲಾಗಿತ್ತು.

ಆಯುರ್ವೇದದ ದೃಷ್ಟಿಕೋಣದಲ್ಲಿ ಆರೋಗ್ಯದ ಮಹತ್ವದ ಬಗ್ಗೆ ವಿಸ್ತಾರವಾಗಿ, ಸುಲಭವಾಗಿ ಮತ್ತು ಹಾಸ್ಯಕರ ರೀತಿಯಲ್ಲಿ ನಮ್ಮೆಲ್ಲರಿಗೂ ತಿಳಿಯುವಂತೆ ಮಾತನಾಡಿದರು. ಯೋಗ, ಧ್ಯಾನ, ಹೋಮಿಯೋಪಥಿ, ಯುನಾನಿ ಮುಂತಾದ ವಿಷಯಗಳನ್ನು ಕುರಿತು ಒಂದು ವ್ಯಕ್ತಿಯ ಜೀವನದಲ್ಲಿ ಇವೆಲ್ಲದರ ಮಹತ್ವವನ್ನು ಕೂಡ ತಿಳಿ ಹೇಳಿದರು.

ನಮ್ಮೆಲ್ಲರ ಭಿನ್ನ ಭಿನ್ನ ಪ್ರಶ್ನೆಗಳಿಗೆ ಉತ್ತರಿಸುತ್ತ ಯಾವ ಸಮಯಕ್ಕೆ ತಿನ್ನಬೇಕು, ಏನು ತಿನ್ನಬೇಕು, ಎಷ್ಟು ತಿನ್ನಬೇಕು ಮತ್ತು ಆರೋಗ್ಯಕರವಾಗಿ ತಿನ್ನುವ ವಿಧಾನವೇನು ಎಂಬುದನ್ನು ಹೇಳಿಕೊಟ್ಟರು. ಈಗಿನ ತರಕಾರಿ, ಹಣ್ಣುಗಳ ಉತ್ಪಾದನೆ ರಾಸಾಯನಿಕ ಖಾದ್ಯಗಳನ್ನು ಬಳಸಿ ಬೆಳೆಸುವ ಕಾರಣದಿಂದಾಗಿ ಮಿತವಾಗಿ ಸೇವಿಸುವ ಸಲಹೆಯನ್ನು ಮಾಡಿದರು. ಕಾರ್ಯಕ್ರಮದ ಕೊನೆಯಲ್ಲಿ ತಮ್ಮ ಸಂಸ್ಥೆಯಲ್ಲಿ ಆಯುರ್ವೇದ ಚಿಕಿತ್ಸೆಯ ಸೌಲಭ್ಯವನ್ನು ಬಳಸುವಂತೆ ನಮ್ಮೆಲ್ಲರನ್ನು ಆಹ್ವಾನಿಸಿದರು.❑

*ರಾಜೇಶ್ವರಿ ಕಲ್ಲೂರ*

# ಕನ್ನಡ ವಚನ ಸಾಹಿತ್ಯದ ಭವ್ಯ ಪರಂಪರೆಯನ್ನು ಉಳಿಸಿ, ಕನ್ನಡದ ಹಿರಿಮೆಯನ್ನು ಕರ್ನಾಟಕಕ್ಕೂ ಹಾಗೂ ಇಡೀ ವಿಶ್ವಕ್ಕೂ ಪರಿಚಯಿಸಿದ ಅಪ್ಪಟ ಕನ್ನಡ ಪ್ರೇಮಿ–ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ



ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕ ದಿನಾಂಕ 12.07.2026ರ ಭಾನುವಾರ ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಸಭಾಂಗಣದಲ್ಲಿ ವಚನ ಸಾಹಿತ್ಯದ ಪಿತಾಮಹರಾದ ಡಾ. ಫ.ಗು. ಹಳಕಟ್ಟಿ ಅವರ ಜಯಂತ್ಯುತ್ಸವವನ್ನು ಹಮ್ಮಿಕೊಂಡಿತ್ತು.

"ಮಡಿಕೆಯ ಮಾಡುವೆಡೆ ಮಣ್ಣೇ ಮೊದಲು, ತೊಡಿಗೆಯ ಮಾಡುವೆಡೆ ಹೊನ್ನೇ ಮೊದಲು, ಶಿವಪಥವರಿವಡೆ ಗುರುಪಥವೇ ಮೊದಲು, ಕೂಡಲಸಂಗಮದೇವರನರಿವೆಡೆ ಶರಣರ ಸಂಗವೇ ಮೊದಲು !" ಎಂಬ ವಚನದ ಮೂಲಕ ಕರ್ನಾಟಕದ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರನ್ನು ಹಾಗೂ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರಾದ ಪೂಜ್ಯ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸ್ಮರಣೆಯೊಂದಿಗೆ ಕಾರ್ಯಕ್ರಮ ಆರಂಭವಾಯ್ತು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಿ ಆಶೀರ್ವಚನ ನೀಡಿದ ನವದೆಹಲಿಯ ಸಾಕೇತ್‌ನಲ್ಲಿರುವ ಸುತ್ತೂರು ಸಾಂಸ್ಕೃತಿಕ ಭವನದ ಪೂಜ್ಯ ಶ್ರೀ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಅವರು ಹಳಕಟ್ಟಿ ಅವರು ಕನ್ನಡ ವಚನ ಸಾಹಿತ್ಯದ ಸಂರಕ್ಷಣೆ ಮೂಲಕ ಕನ್ನಡವನ್ನು ಕರ್ನಾಟಕಕ್ಕೆ ವಿಶ್ವಕ್ಕೆ ಪರಿಚಯಿಸಿದ ಅಪ್ಪಟ ಕನ್ನಡ ಪ್ರೇಮಿ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. 12ನೇ ಶತಮಾನದಲ್ಲಿ ಶರಣರು ಸಮಾಜಕ್ಕೆ ನೀಡಿದ್ದ ಈ ವಚನಗಳನ್ನು ಫ. ಗು. ಹಳಕಟ್ಟಿ ಅವರು ಸಂಗ್ರಹಿಸಿ ನೀಡದಿದ್ದರೆ ಇಂದು ಕನ್ನಡಿಗರಿಗೆ ಅವುಗಳ ಮಾಹಿತಿಯೇ ಇರುತ್ತಿರಲಿಲ್ಲ.

12 ನೇ ಶತಮಾನದಲ್ಲಿ ನಡೆದ ಬಸವಾದಿ ಶರಣರ ಸಾಮಾಜಿಕ ಕ್ರಾಂತಿಯ ನಂತರ ನಶಿಸಿ ಹೋಗುತ್ತಿದ್ದ ವಚನ ಸಾಹಿತ್ಯದ ತಾಳೆಗರಿಗಳನ್ನು ರಾಜ್ಯ ಹಾಗೂ ಮಹಾರಾಷ್ಟ್ರದ ವಿವಿಧ ಭಾಗಗಳಿಗೆ ತೆರಳಿ ಹುಡುಕಿ ಸಂಗ್ರಹಿಸಿ ಅವುಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಉದ್ದೇಶದಿಂದ ಗ್ರಂಥರೂಪದಲ್ಲಿ ಎಲ್ಲರೂ ಓದಲು ಅನುಕೂಲವಾಗುವಂತೆ ಮುದ್ರಿಸಿದರು. ಮುದ್ರಿಸಲು ಹಳಕಟ್ಟಿ ಅವರ ಬಳಿ ಕಾಸೂ ಇರಲಿಲ್ಲ. ವಿಜಾಪುರದ ತಮ್ಮ ಮನೆಯನ್ನೇ ಮಾರಿ ಅಮೂಲ್ಯವಾದ ಈ ವಚನಗಳನ್ನು ಮುದ್ರಿಸುತ್ತಾರೆ.



ಅದೊಂದು ಧಾರವಾಡದ ಕಡು ಬೇಸಿಗೆಯ ದಿನ. 1955ರ ಕರ್ನಾಟಕ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಪ್ರತಿಷ್ಠಿತ ಗೌರವ ಡಾಕ್ಟರೇಟ್ ಪದವಿ ಪ್ರದಾನ ಸಮಾರಂಭ. ಡಾ. ಪಾವಟೆ ಕುಲಪತಿಗಳಾಗಿದ್ದರು. ವಚನ ಸಾಹಿತ್ಯದ ಪಿತಾಮಹನೆಂಬ ಬಿರುದಿಗೆ ಪಾತ್ರರಾಗಿದ್ದ ಫ.ಗು. ಹಳಕಟ್ಟಿಯವರಿಗೆ ಗೌರವ ಡಾಕ್ಟರೇಟ್ ನೀಡಿದ ದಿನ. ಮಾಸ್ತಿ ಅವರಿಗೂ ಗೌರವ ಡಾಕ್ಟರೇಟ್ ಸಂದಿತ್ತು. ಕಾರ್ಯಕ್ರಮದ ನಂತರ ಅತಿಥಿಗಳಿಗೆ ವಿಶ್ವವಿದ್ಯಾಲಯದ ಅತಿಥಿಗೃಹದಲ್ಲಿ ಭೋಜನಕೂಟ ಏರ್ಪಡಿಸಲಾಗಿತ್ತು. ಡಾಕ್ಟರೇಟ್ ಪದವಿ ಸ್ವೀಕರಿಸಲು ಕೋಟು, ಕಚ್ಚೆ, ಪೇಟ ಧರಿಸಿ ಬಂದಿದ್ದ ಹಳಕಟ್ಟಿಯವರು ಔತಣಕೂಟದಲ್ಲಿ ಪಾಲ್ಗೊಂಡು ಊಟಕ್ಕೆ ಕುಳಿತರು. ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಪಾವಟೆ ಅವರು ರಜಿಸ್ಟ್ರಾರ್ ಆಗಿದ್ದ ಎಸ್ ಎಸ್ ಒಡೆಯರ್ ಅವರನ್ನು ಕರೆದು ಫ.ಗು ಹಳಕಟ್ಟಿ ಅವರಿಗೆ ಕೋಟು ಕಳೆದು ಊಟ ಮಾಡಲು ಸೂಚಿಸಿದರು. ಆಗ ವಿ.ವಿ.ಯ ರಿಜಿಸ್ಟ್ರಾರ್ ಆಗಿದ್ದ ಒಡೆಯರ್ ಹಳಕಟ್ಟಿಯವರನ್ನು ಉದ್ದೇಶಿಸಿ 'ಸಾರ್ ಸೆಖೆ ಬಾಳಾ ಇದೆ. ಕೋಟ್ ತೆಗೆದು ಆರಾಮಾಗಿ ಊಟ ಮಾಡ್ರಲಾ' ಎಂದರು. ಆಗ ಹಳಕಟ್ಟಿಯವರು ಒಡೆಯರ್‌ರವರನ್ನು ಹತ್ತಿರ ಕರೆದು 'ತಮ್ಮಾ ಕೋಟಿನ ಒಳಗಾ ಅಂಗಿ ಪೂರಾ ಹರಿದು ಹೋಗದ, ಅದಕ್ಕ ನಾ ಕೋಟ್ ಹಾಕ್ಕಂಡಿದೀನಿ. ನಾನು ಸಖೆ ತಡಿತೀನಿ ತಮ್ಮಾ ಆದರ ಅವಮಾನ ತಡಿಯಾಂಗಿಲ್ಲ' ಎಂದಾಗ ಒಡೆಯರ್ ಮೂಕ ವಿಸ್ಮಿತರಾಗಿ ನಿಂತರು. ಈ ಘಟನೆಯನ್ನು ಕಾರ್ಯಕ್ರಮವೊಂದರಲ್ಲಿ ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ ಅವರು ನೆನೆಯುತ್ತ ಕಣ್ಣೀರಾಗಿದ್ದರು. ಇಷ್ಟು ದೊಡ್ಡ ಡಾಕ್ಟರೇಟ್ ಪಡೆದ ಹಳಕಟ್ಟಿ ಅವರಂಥ ಒಬ್ಬ ವಿದ್ವಾಂಸ ಡಾಕ್ಟರೇಟ್ ಕೊಟ್ಟಿದ್ದಕ್ಕಾರ ಒಂದು ಹೊಸಾ ಅಂಗಿ ಹಾಕೊಂಡಬರಬಹುದಿತ್ತಾ? ಆದ್ರ ಒಂದು ಹೊಸಾ ಅಂಗಿ ತಗೋಳ್ಳಾಕೂ ಅವರಲ್ಲಿ ಶಕ್ತಿ ಇದ್ದಿಲ್ಲ. ಕೋಟ್ ಹಾಕೊಂಡ ಊಟಕ್ಕ ಕುಳಿತ್ಕೊತಾರ."

"ನನ್ನ ಆಸ್ತಿಗಿಂತ ಬಸವಣ್ಣನವರ ವಚನಗಳೇ ನನಗೆ ದೊಡ್ಡ ಆಸ್ತಿ. ಈ ಮನೆ ಹೋದರೆ ಬಾಡಿಗೆ ಮನೆಯಲ್ಲಿ ಇರಬಹುದು. ಆದರೆ ಈ ತಾಳೆಗರಿಗಳು ಒಮ್ಮೆ ನಾಶವಾದರೆ, ಕನ್ನಡಿಗರು ತಮ್ಮ ಅತ್ಯಂತ ಅಮೂಲ್ಯವಾದ ಸಂಸ್ಕೃತಿಯನ್ನು ಕಳೆದುಕೊಳ್ಳುತ್ತಾರೆ." ಎಂಬುದು ಅವರ ಕಾಳಜಿಯಾಗಿತ್ತು. ಅವರ ದೊಡ್ಡ ಮಗ ತೀರಿಕೊಂಡಾಗಲೂ ಮುದ್ರಣಾಲಯಕ್ಕೆ ರಜೆ ಕೊಡದೇ ಪತ್ರಿಕೆ ಪ್ರಿಂಟ್ ಮಾಡಿ ಪೋಸ್ಟ್ ಮಾಡಿಸಿ ನಂತರ ಶವಸಂಸ್ಕಾರಕ್ಕೆ ಪ್ರಯಾಣ ಬೆಳೆಸುತ್ತಾರೆ. ವಚನಗಳ ಮುದ್ರಣ ಸಂರಕ್ಷಣೆಯೇ ಅವರ ಉಸಿರಾಗಿತ್ತು. 250ಕ್ಕೂ ಹೆಚ್ಚು ವಚನಕಾರರನ್ನು ಹಾಗೂ 40 ಹರಿಹರ ರಗಳೆಗಳನ್ನು ಸಂಶೋಧಿಸಿ ಪ್ರಕಟಿಸಿದ ಶ್ರೇಯ ಡಾ. ಫ.ಗು ಹಳಕಟ್ಟಿ ಅವರಿಗೆ ಸಲ್ಲುತ್ತದೆ.

ಅಷ್ಟೇ ಅಲ್ಲದೆ ಅವರು ಬಿಜಾಪುರ ಜಿಲ್ಲೆಯು ಭೀಕರ ಬರಗಾಲ ಎದುರಿಸುತ್ತಿರುವ ಸಮಯದಲ್ಲಿ ಮೈಸೂರು ರಾಜರ ಅಪ್ಪಣೆ ಪಡೆದು ಸರ್. ಎಂ. ವಿಶ್ವೇಶ್ವರಯ್ಯ ಅವರನ್ನು ಕರೆಸಿ ಬಿಜಾಪುರ ಜಿಲ್ಲೆಯಲ್ಲಿ ಅನೇಕ ಕೆರೆಗಳನ್ನು ನಿರ್ಮಿಸುವ ಮೂಲಕ ಸಾಮಾಜಿಕ ಕಾರ್ಯಗಳನ್ನು ಸಹ ಮಾಡಿದ್ದರು, ಜೊತೆಗೆ ಮುಂಬೈ ಪ್ರಾಂತ್ಯದಲ್ಲಿ ಮರಾಠಿ ಭಾಷೆಯ ಪ್ರಭಾವವನ್ನು ಅರಿತ ಅವರು ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಲು ಅನೇಕ ಕನ್ನಡ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ಮುಖಾಂತರ ಕನ್ನಡ ಪ್ರೇಮವನ್ನು ಮೆರೆದರು. ವಿಜಾಪುರವನ್ನೇ ಕಾರ್ಯಕ್ಷೇತ್ರ ಮಾಡಿಕೊಂಡ ಅವರು ವೀರಶೈವ ವಿದ್ಯಾವರ್ಧಕ ಸಂಘ, ಸಿದ್ದೇಶ್ವರ ಬ್ಯಾಂಕ್ ಮುಂತಾದವುಗಳ ಸ್ಥಾಪನೆಗೆ ಕಾರಣರಾದರು.

12ನೇ ಶತಮಾನದಲ್ಲಿ ಅತ್ಯಂತ ಗೂಢಾರ್ಥವಾಗಿರುವ ನಮಗೆ ತಿಳಿಯದ ವೇದಗಳು ಕಠಿಣ ಉಪನಿಷತ್ತುಗಳನ್ನು ಸರಳವಾಗಿ ಸುಲಿದ ಬಾಳೆ ಹಣ್ಣಿನಂತೆ ಕನ್ನಡದಲ್ಲಿ ಸುಲಭವಾಗಿ ಓದುವಂತೆ, ಸುಲಭವಾದ ರೀತಿಯಲ್ಲಿ ಜ್ಞಾನವನ್ನು ಪಡೆಯುವಂತಹ ವಚನ ಸಾಹಿತ್ಯವನ್ನು ಇಂದು ನಾವು ಬೇರೆ ಬೇರೆ ಭಾಷೆಗಳಲ್ಲಿ ಓದುತ್ತಿರುವುದಕ್ಕೆ ಕಾರಣವೇ ಫ. ಗು. ಹಳಕಟ್ಟಿ ಅವರು ಎಂದು ಅವರ ಕಾರ್ಯ ವೈಖರಿಯನ್ನು ಶ್ಲಾಘಿಸಿದರು.

ಕಾರ್ಯಕ್ರಮವು ಆರಂಭದಲ್ಲಿ 11.07.2026ರಂದು ನಿಧನರಾದ ಸಂಗೀತ ಸಾಮ್ರಾಜ್ಞಿ ಎಸ್. ಜಾನಕಿ ಅವರಿಗೆ ಒಂದು ನಿಮಿಷದ ಮೌನ ಆಚರಿಸುವುದರ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಆ ಬಳಿಕ ಅತಿಥಿ ಗಣ್ಯರು ಹಳಕಟ್ಟಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ದೀಪ ಬೆಳಗಿಸಿದರು. ರಚನಾ ಗೋವಿಂದರಾಜು ಅವರ ವಚನ ಗಾಯನದೊಂದಿಗೆ ಕಾರ್ಯಕ್ರಮ ಮುಂದುವರಿಯಿತು. ತದನಂತರ ಕನ್ನಡದ ಒಂಭತ್ತು ಜನ ಮಕ್ಕಳು ಸ್ಫುಟವಾದ ಕನ್ನಡದಲ್ಲಿ ಡಾ. ಫ.ಗು. ಹಳಕಟ್ಟೆಯವರ ಕುರಿತು ಬದುಕು-ಕೃತಿಯ ಕುರಿತು ಪ್ರಬಂಧ ಮಂಡಿಸಿದ್ದು ವಿಶೇಷವಾಗಿತ್ತು. ಫ.ಗು. ಹಳಕಟ್ಟಿ ಅವರು ವಚನ ಸಾಹಿತ್ಯ ಹಾಗೂ ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕಾಗಿ ತಮ್ಮ ಇಡೀ ಬದುಕನ್ನು ಹೇಗೆ ಸಮರ್ಪಿಸಿಕೊಂಡರು ಎನ್ನುವುದನ್ನು ಎಳೆ ಎಳೆಯಾಗಿ ಹೇಳುವುದರ ಜೊತೆಗೆ ಬಸವಣ್ಣ, ಅಕ್ಕ ಮಹಾದೇವಿಯವರಂತಹ ಶರಣರ ಚಿಂತನೆಗಳನ್ನು ಕುರಿತಾಗಿ ಮಾತನಾಡಿದರು. ಕೆಲವು ಹಿರಿಯರು ಮಕ್ಕಳು ವಚನ ಗಾಯನವನ್ನು ಕೂಡ ಮಾಡಿದರು.

ತದನಂತರ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಚಂದ್ರಶೇಖರ್ ಅವರು ಮಾತನಾಡಿ ಯಾವ ರೀತಿ ಫ.ಗು. ಹಳಕಟ್ಟೆಯವರು ಸ್ವಾತಂತ್ರ ಪೂರ್ವದಲ್ಲಿ ಬರಪೀಡಿತ ಪ್ರದೇಶವಾದ ಬಿಜಾಪುರದ ಅಭಿವೃದ್ಧಿಗಾಗಿ ಕೆಲಸ ಮಾಡುವುದರ ಜೊತೆಗೆ ಮರಾಠಿಮಯವಾಗಿದ್ದ ಆ ಪ್ರದೇಶವನ್ನು ಕನ್ನಡಮಯವನ್ನಾಗಿ ಮಾಡಿದ್ದನ್ನು ಹೇಳುತ್ತಾ ನಮ್ಮ ಪರಿಷತ್ತು ಅದೇ ಹಾದಿಯಲ್ಲಿ ಪ್ರಯತ್ನ ಮಾಡುತ್ತಿದೆ ಎಂದರು. ಮುಖ್ಯ ಅತಿಥಿಯಾಗಿದ್ದ ಸರ್ವೋಚ್ಚ ನ್ಯಾಯಾಲಯ ನ್ಯಾಯವಾದಿ ಕಿರೀತ್ ಜವಳಿ ಅವರು ಮಾತನಾಡಿ ತಂದೆವರಾದ ದಿ. ಶ್ರೀ ಶರತ್ ಜವಳಿ ಅವರಿಂದ ವಚನ ಸಾಹಿತ್ಯದ ಬಗ್ಗೆ ಅಲ್ಪ ಸ್ವಲ್ಪ ತಿಳಿದುಕೊಂಡಿದ್ದೇವೆ ಹಾಗೂ ಈಗಿನ ಪೀಳಿಗೆಯಲ್ಲಿ ವಚನಗಳ ಬಗ್ಗೆ ಅರಿವು ಮೂಡಿಸುವ ಅಗತ್ಯವಿದೆ, ಈ ಕಾರ್ಯವನ್ನು ಅವರ ಪೋಷಕರು ಮಾಡಬೇಕು ಎಂದು ಆಶಿಸಿದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ದೆಹಲಿ ಘಟಕದ ಕಾರ್ಯವನ್ನು ಶ್ಲಾಘಿಸಿದರಲ್ಲದೇ ಅವರನ್ನು ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಿದಕ್ಕೆ ಸಂತೋಷ ವ್ಯಕ್ತ ಪಡಿಸಿದರು.

ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಆರ್ ರೇಣುಕುಮಾರ್ ಅವರು ಮಾತನಾಡಿ, ಫ.ಗು ಹಳಕಟ್ಟಿ ಅವರು ವಚನಗಳ ಸಂರಕ್ಷಣೆಗಾಗಿ ಮಾಡಿದ ಕಾರ್ಯ ಸಾಧನೆಗಳ ಬಗ್ಗೆ ಹೇಳುತ್ತಾ, ಹಳಕಟ್ಟಿ ಅವರಂತಹ ಸಾಧಕರ ಸಾಧನೆ ಯಾವಾಗಲೂ ಒಗಟಾಗಿ ಉಳಿಯದೇ ಒಗಟಿನ ಉತ್ತರವಾದಾಗ ಮಾತ್ರ ಅದು ಸಮಾಜಕ್ಕೆ ತಲುಪಲು ಸಾಧ್ಯ ಎಂದು ಹೇಳುತ್ತಾ ಘಟಕದ ಕಾರ್ಯವನ್ನು ಕುರಿತು ಪ್ರಶಂಸಿದರು.

ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಸುಜಾತ ನಿಂಬಾಳ ಅವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ದೆಹಲಿ ಘಟಕವು ಬೆಳೆದು ಬಂದ ಹಾದಿ, ಧ್ಯೇಯೋದ್ದೇಶಗಳ ಬಗ್ಗೆ ವಿವರಿಸಿದರು. ಪರಿಷತ್ತಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಪ್ಪ ಎಂ. ಅವರು ಸ್ವಾಗತಿಸಿದರೆ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ರಾಜಕುಮಾರ ನೀಲೂರ ಅವರು ನಿರೂಪಿಸಿದರು, ಜಂಟಿ ಕಾರ್ಯದರ್ಶಿಗಳಾದ ಶ್ರೀ ಎಚ್.ಎಸ್. ತೇಲಿ ಅವರು ವಂದಿಸಿದರು, ತಾಂತ್ರಿಕ ನಿರ್ವಹಣೆಯನ್ನು ಪರಿಷತ್ತಿನ ಕೋಶಾಧ್ಯಕ್ಷರಾದ ಶ್ರೀ ರಾಜಶೇಖರ ಪಾಟೀಲ ಅವರು ನಿರ್ವಹಿಸಿದರು, ಕಾರ್ಯಕ್ರಮದ ನಂತರದ ದಾಸೋಹ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ಈ ಕಾರ್ಯಕ್ರಮದಲ್ಲಿ ಪರಿಷತ್ತಿನ ಪದಾಧಿಕಾರಿಗಳು ಹಾಗೂ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು ಮತ್ತು ಅನೇಕ ದೆಹಲಿ ಎನ್‌ಸಿಆರ್ ಕನ್ನಡಿಗರು, ಮಕ್ಕಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ❑

**ಶಿವಪ್ಪ ಎಂ.**

---

# ಜನಕಪುರಿ ಕನ್ನಡ ಕೂಟದಿಂದ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ



ಸಾವಿರಾರು ವರ್ಷಗಳಿಂದ ಭಾರತದಲ್ಲಿ ಹಿರಿಯರು ನಡೆಸಿಕೊಂಡು ಬರುತ್ತಿರುವ ದೇಹ, ಮನಸ್ಸು ಮತ್ತು ಆತ್ಮವನ್ನು ಒಗ್ಗೂಡಿಸುವ ಪ್ರಾಚೀನ ಭಾರತೀಯ ಜೀವನ ಪದ್ಧತಿ ಅಂದರೆ ಯೋಗ. ಯೋಗಕ್ಕೆ ಕಳೆದ 12 ವರ್ಷದಿಂದ ದೇಶದ ಎಲ್ಲ ಕಡೆ ಹಾಗೂ ವಿದೇಶದಲ್ಲೂ ಕೂಡ ಒಂದು ಒಳ್ಳೆಯ ಆಯಾಮ,ಮನ್ನಣೆ ದೊರೆತು ಅಂತರಾಷ್ಟ್ರೀಯ ಯೋಗ ದಿನಾಚರಣೆ ಪ್ರತಿ ವರ್ಷ 21ಜೂನ್ ನಂದು ನಡೆಯುತ್ತಾ ಬಂದಿದೆ. ಈ ಬಾರಿ ಯೋಗ ದಿನಾಚರಣೆ ಭಾನುವಾರ ದಿನಕ್ಕೆ ಬಂದಿದ್ದು ಒಂದು ಸುಯೋಗ.

ಜನಕಪುರಿ ಕನ್ನಡ ಕೂಟ ಪ್ರಥಮ ಬಾರಿಗೆ ವರ್ಷ 2025 ರಂದು ಆಚರಣೆ ಮಾಡಿತ್ತು. ಅದರಂತೆ ಈ ಬಾರಿ ಕೂಡ 21 ಜೂನ್ 2026 ರಂದು ಯೋಗ ದಿನಾಚರಣೆಯನ್ನು ಆಚರಿಸಿತು. ದೆಹಲಿಯ ಅನೇಕ ಕಡೆಗಳಲ್ಲಿ ಬೆಳಿಗಿನ ಸಮಯ ಯೋಗ ದಿನಾಚರಣೆ ಆಚರಿಸುವ ಕಾರಣ, ನಮ್ಮ ಕೂಟವು ಕಳೆದ ವರ್ಷದ ಹಾಗೆ ಈ ಬಾರಿಯೂ ಕೂಡ ಸಾಯಂಕಾಲ ಯೋಗ ಕಾರ್ಯಕ್ರವನ್ನು ಏರ್ಪಡಿಸಿತು.

ಕೂಟದ ಯೋಗ ದಿನಾಚರಣೆ ಜನಕಪುರಿ ಸಿ2 ಬ್ಲಾಕ್‌ನ ಪಾರ್ಕ್‌ನಲ್ಲಿ ಮಾಡಲಾಯಿತು. ಕೂಟದ ಸುಮಾರು 35-40 ಮಕ್ಕಳು, ಮಹಿಳೆಯರು ಹಾಗೂ ಮಹನೀಯರು ಇದರಲ್ಲಿ ಭಾಗವಹಿಸಿ ಪ್ರಯೋಜನ ಪಡೆದರು.

ಸಂಜೆ 5.30 ಕ್ಕೆ ಮಹಿಳಾ ಮಂಡಳಿಯಿಂದ ಗಣೇಶ ಸ್ತುತಿಯೊಂದಿಗೆ ಶುರುವಾಯಿತು. ನಂತರ ಕೂಟದ ಅಧ್ಯಕ್ಷರಾದ ಡಾ. ಅಶೋಕ ಎಂ. ಈಟಿ ಅವರು ಬಂದ ಮುಖ್ಯ ಅತಿಥಿ ಡಾ. ಈಶ್ವರ ಆಚಾರ್ಯ-(program officer-Morarji Desai Yoga ಸಂಸ್ಥೆ) ಸಂಸ್ಥೆಯಿಂದ ಬಂದ ತರಬೇತುದಾರರನ್ನು ಹಾಗೂ ಬಂದ ಎಲ್ಲರನ್ನು ಸ್ವಾಗತಿಸುತ್ತಾ ಯೋಗದ ಪ್ರಯೋಜನದ ಬಗ್ಗೆ ಹೇಳಿದರು. ನಂತರ ಶ್ರೀಮತಿ ಸವಿತಾ ಇನಾಮದಾರ್ ಅವರು ರಚಿಸಿದ ಯೋಗದ ಕುರಿತ ಹಾಡನ್ನು ಪ್ರಸ್ತುತ ಪಡಿಸಿದರು.

ನಂತರ ಯೋಗ ತರಬೇತು ದಾರರ ಮೂಲಕ ಸುಮಾರು 45 ನಿಮಿಷ ವಿವಿಧ ರೀತಿಯ ಸರಳವಾದ ಯೋಗವನ್ನು ಎಲ್ಲರೂ ಮಾಡಿದರು. ಇದಾದ ನಂತರ ಮುಖ್ಯ ಅತಿಥಿಗಳಾದ ಡಾಕ್ಟರ್ ಈಶ್ವರ ಆಚಾರ್ಯ ಅವರು ಮಾತನಾಡುತ್ತಾ, ಭಾರತ ಪರಂಪರೆಯಲ್ಲಿ ಯೋಗ ಹೇಗೆ ಹಾಸುಹೊಕ್ಕಾಗಿದೆ ಹಾಗೂ ಅದರ ಪ್ರಯೋಜನಗಳನ್ನು ಎಲ್ಲರಿಗೂ ತಿಳಿಸಿದರು.

ತದನಂತರ ಲಘುವಾಗಿ ಚಹಾ ಬಿಸ್ಕೆಟ್ ಸೇವಿಸಿದ ನಂತರ ಕೆಲವು ಯೋಗದ ಕುರಿತು ರಸ ಪ್ರಶ್ನೆ ಕಾರ್ಯಕ್ರಮ ನಡೆಯಿತು. ಉಪಾಧ್ಯಕ್ಷರಾದ ಡಾ. ಎಸ್.ಎಲ್. ಭಂಡಾರ್‌ಕರ ಅವರು ಧನ್ಯವಾದ ಸಲ್ಲಿಸಿದರು. ಕೂಟದ ಸಮಿತಿಯವರು ಹಾಗೂ ಮಹಿಳಾ ಮಂಡಳಿಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಭಾಗವಹಿಸಿದ ಎಲ್ಲರಿಗೂ ಯೋಗ ಮ್ಯಾಟ್ ಹಾಗೂ ಟಿ ಶರ್ಟ್ ವಿತರಿಸಲಾಯಿತು. ❑

**ಕೃಷ್ಣ ರಾಜ್**

# ಗುರುಗ್ರಾಮ ಕನ್ನಡ ಸಂಘದ–ಶ್ರೀ ಸತ್ಯನಾರಾಯಣ ಪೂಜೆ





ದಿನಾಂಕ 26.07.2026 ಭಾನುವಾರದಂದು ಗುರುಗ್ರಾಮದ ಸೆಕ್ಟರ್–4 ರಲ್ಲಿರುವ ವೈಶ್ಯ ಸಮಾಜದ ಧರ್ಮ ಶಾಲೆಯ ಸಭಾಂಗಣದಲ್ಲಿ ಜರುಗಿದ ಸಾಮೂಹಿಕ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆಯು ಅತ್ಯಂತ ಭಕ್ತಿಪೂರ್ವಕವಾಗಿ ಮತ್ತು ಸ್ಮರಣೀಯವಾಗಿ ನೆರವೇರಿತು.

ಕಳೆದ ಹಲವು ತಿಂಗಳುಗಳಿಂದ ನಡೆದ ಶ್ರದ್ಧೆಯ ಯೋಜನೆ, ಎಲ್ಲರ ಶ್ರಮ ಮತ್ತು ನಿಸ್ವಾರ್ಥ ಸೇವೆಯ ಫಲವಾಗಿ ದೆಹಲಿ–ಎನ್‌ಸಿಆರ್ ಕನ್ನಡಿಗರು, ನಿವೃತ್ತಿ ಅಥವಾ ವರ್ಗಾವಣೆ ಹೊಂದಿ ಕರುನಾಡಿಗೆ ಮರಳಿದ ಕನ್ನಡಿಗರಷ್ಟೇ ಅಲ್ಲದೆ, ಕನ್ನಡೇತರ ಭಕ್ತಾದಿಗಳೂ ಉದಾರವಾಗಿ ಸಹಕಾರಿಸಿದರು. ಸಮರ್ಪಕವಾಗಿ ಸಂಗ್ರಹಿಸಿದ ನಿಧಿ, ಪೂಜೆಯ ಹಿಂದಿನ ದಿನ ಶ್ರಮಪಟ್ಟು ಮಾಡಿದ ಪೂರ್ವ ಸಿದ್ಧತೆಗಳು, ಪದಾರ್ಥಗಳ ವ್ಯವಸ್ಥೆ ಮತ್ತು ಇತರೆ ಸಣ್ಣ ದೊಡ್ಡ ಕಾರ್ಯಗಳು ಎಲ್ಲವೂ ಅತ್ಯಂತ ವ್ಯವಸ್ಥಿತವಾಗಿ ನೆರವೇರಿದ್ದರಿಂದ ಈ ಭಕ್ತಿ ಕಾರ್ಯಕ್ರಮವು ಯಶಸ್ವಿಯಾಗಿ ನಡೆದು ನಮ್ಮೆಲ್ಲರ ಹೃದಯ ತುಂಬಿತು.

ಹೂವಿನ ಅಲಂಕಾರದಿಂದ ಕಂಗೊಳಿಸಿದ ಪೂಜಾ ಸಭಾಂಗಣವು ಭಕ್ತಿಯ ಸುಗಂಧವನ್ನು ಹರಡಿತು. ಪೂಜ್ಯ ಪಂಡಿತರ ಶಾಸ್ತ್ರೋಕ್ತ ಮತ್ತು ಭಾವಪೂರ್ಣ ಪೂಜೆ, ಮಂಗಳಾರತಿ ಮತ್ತು ಪ್ರಾರ್ಥನೆಗಳು ಎಲ್ಲರ ಮನಸ್ಸಿಗೆ ಶಾಂತಿ ಮತ್ತು ಪಾವನತೆಯನ್ನು ನೀಡಿದವು. ಬೆಂಗಳೂರಿನಿಂದ ಆಗಮಿಸಿದ ಅನುಭವಿ ಅಡುಗೆ ಭಟ್ಟರು ಶ್ರೀ ರಾಮಣ್ಣ ಮತ್ತು ಹನುಮಯ್ಯ ಸಿದ್ಧಪಡಿಸಿದ ಮಹಾ ಪ್ರಸಾದ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಈ ಯಶಸ್ಸಿನ ಹಿಂದೆ ಶ್ರಮಿಸಿದ ಅಡುಗೆ ಭಟ್ಟರು, ನಮ್ಮ ಸಂಘದ ಸಮಸ್ತ ಪದಾಧಿಕಾರಿಗಳು, ಕಾರ್ಯಕಾರಿಣಿ ಸದಸ್ಯರು, ಕಾರ್ಯಕರ್ತರು ಹಾಗೂ ಸ್ವಯಂಸೇವಕರಿಗೆ ಹೃತ್ಪೂರ್ವಕ ಅಭಿನಂದನೆಗಳು ಮತ್ತು ಅನಂತ ಅನಂತ ಧನ್ಯವಾದಗಳು. ದೆಹಲಿ–ಎನ್‌ಸಿಆರ್ ನ ವಿವಿಧ ಭಾಗಗಳಿಂದ ಆಗಮಿಸಿದ 400 ಕ್ಕೂ ಹೆಚ್ಚಿನ ಭಕ್ತಾದಿಗಳೆಲ್ಲರ ಉಪಸ್ಥಿತಿಯು ಈ ಭಕ್ತಿಯ ಕಾರ್ಯಕ್ರಮಕ್ಕೆ ಕಳೆ ಬೆರೆಸಿದರೆ, ಗಣ್ಯ ರಾಜಕೀಯ ಮುಖಂಡರ ಆಗಮನವೂ ಕಾರ್ಯಕ್ರಮದ ಗೌರವವನ್ನು ಮತ್ತಷ್ಟು ಹೆಚ್ಚಿಸಿತು.

ಈ ಯಶಸ್ಸನ್ನು ಸಾಧ್ಯವಾಗಿಸಿದ ಪ್ರತಿಯೊಬ್ಬ ದಾನಿಗೂ, ಸ್ವಯಂಸೇವಕರಿಗೂ, ಸಂಘಟಕರಿಗೂ, ಅಡುಗೆ ತಂಡಕ್ಕೂ, ಅಲಂಕಾರದಲ್ಲಿ ಕೈಜೋಡಿಸಿದವರಿಗೂ, ಹಿರಿಯರಿಗೂ, ಮಾರ್ಗದರ್ಶಕರಿಗೂ ಮತ್ತು ಭಾಗವಹಿಸಿದ ಎಲ್ಲರಿಗೂ ಗುರುಗಾಂವ್ ಕನ್ನಡ ಸಂಘವು ಧನ್ಯವಾದಗಳು ಸಲ್ಲಿಸುತ್ತದೆ. ಏಕೆಂದರೆ ಎಲ್ಲರ ಪರಿಶ್ರಮ, ಸಹಕಾರ ಮತ್ತು ಭಕ್ತಿಭಾವದಿಂದಲೇ ಈ ಪೂಜೆ ಇಷ್ಟು ಸುಂದರವಾಗಿ, ಇಷ್ಟು ವೈಭವದಿಂದ ನೆರವೇರಲು ಸಾಧ್ಯವಾಯಿತು. ಇಂತಹ ಕಾರ್ಯಕ್ರಮಗಳು ನಮ್ಮ ಸಂಸ್ಕೃತಿ, ಒಗ್ಗಟ್ಟು ಮತ್ತು ಭಕ್ತಿಯ ಶಕ್ತಿಯನ್ನು ಮತ್ತೊಮ್ಮೆ ನೆನಪಿಸುತ್ತವೆ. ಶ್ರೀ ಸತ್ಯನಾರಾಯಣ ಸ್ವಾಮಿಯ ಕೃಪೆಯಿಂದ ಎಲ್ಲರ ಮನೆಗಳಲ್ಲಿ ಸುಖ, ಶಾಂತಿ, ಆರೋಗ್ಯ ಮತ್ತು ಸಮೃದ್ಧಿ ಸದಾ ನೆಲೆಸಲಿ. ಈ ಭಕ್ತಿ ಕಾರ್ಯಕ್ರಮ ಯಶಸ್ವಿಗೊಳಿಸಿದ ತಮಗೆಲ್ಲರಿಗೂ ಮತ್ತೊಮ್ಮೆ ಹೃದಯಪೂರ್ವಕ ಧನ್ಯವಾದಗಳು.❑

***ಶಾಂತಕುಮಾರ ನಿಂಬಾಳ***

# ಚಿಣ್ಣರ ಲೋಕ

## ಆರೋಗ್ಯದ ರಹಸ್ಯ

ಬಹಳ ಕಾಲದ ಹಿಂದೆ, ಒಂದು ಹಳ್ಳಿಯಲ್ಲಿ ಶಂಕರ್ ಎಂಬ ವೃದ್ಧ ವ್ಯಕ್ತಿಯೊಬ್ಬ ವಾಸಿಸುತ್ತಿದ್ದನು. ಅವನಿಗೆ ಎಂಬತ್ತರ ಹರೆಯ ದಾಟಿದ್ದರೂ, ನಲವತ್ತು ವರ್ಷದ ಯುವಕನಿಗಿಂತಲೂ ಹೆಚ್ಚು ಆರೋಗ್ಯಶಾಲಿಯಾಗಿ ಕಾಣಿಸುತ್ತಿದ್ದನು. ಜನರು ಪದೇ ಪದೇ ಅವನ ಆರೋಗ್ಯದ ರಹಸ್ಯವನ್ನು ತಿಳಿಯಲು ಬಯಸುತ್ತಿದ್ದರಾದರೂ, ಅವನು ಎಂದಿಗೂ ಏನನ್ನೂ ಹೇಳುತ್ತಿರಲಿಲ್ಲ. ಒಂದು ದಿನ ರಾಜನಿಗೂ ಅವನ ಬಗ್ಗೆ ತಿಳಿಯಿತು ಮತ್ತು ರಾಜನೂ ಸಹ ಅವನ ಆರೋಗ್ಯದ ರಹಸ್ಯವನ್ನು ತಿಳಿಯಲು ಉತ್ಸುಕನಾದನು.

ರಾಜನು ತನ್ನ ಗೂಢಚಾರರಿಗೆ ಶಂಕರನ ಮೇಲೆ ಕಣ್ಣಿಡಲು ಆದೇಶಿಸಿದನು. ಗೂಢಚಾರರು ವೇಷ ಮರೆಸಿಕೊಂಡು ಅವನ ಮೇಲೆ ನಿಗಾ ಇಡಲಾರಂಭಿಸಿದರು. ಮರುದಿನ ಮುಂಜಾನೆ ಶಂಕರನು ಬೇಗನೆ ಎದ್ದು ಎಲ್ಲೋ ಹೋಗುತ್ತಿರುವುದನ್ನು ಅವರು ನೋಡಿದರು ಮತ್ತು ಅವನನ್ನು ಹಿಂಬಾಲಿಸಿದರು. ಶಂಕರನು ಅತ್ಯಂತ ವೇಗವಾಗಿ ಹೆಜ್ಜೆ ಹಾಕುತ್ತಿದ್ದನು. ಮೈಲಿಗಟ್ಟಲೆ ನಡೆದ ನಂತರ ಅವನು ಒಂದು ಬೆಟ್ಟವನ್ನು ಹತ್ತತೊಡಗಿದನು ಮತ್ತು ಇದ್ದಕ್ಕಿದ್ದಂತೆ ಗೂಢಚಾರರ ಕಣ್ಣಿಗೆ ಕಾಣದಂತೆ ಮಾಯವಾದನು. ಗೂಢಚಾರರು ಅಲ್ಲಿಯೇ ನಿಂತು ಅವನಿಗಾಗಿ ಕಾಯತೊಡಗಿದರು.

ಸ್ವಲ್ಪ ಸಮಯದ ನಂತರ ಅವನು ಹಿಂತಿರುಗಿದನು. ಅವನು ತನ್ನ ಮುಷ್ಟಿಯಲ್ಲಿ ಕೆಲವು ಸಣ್ಣ ಸಣ್ಣ ಹಣ್ಣುಗಳನ್ನು ಹಿಡಿದುಕೊಂಡಿದ್ದನು ಮತ್ತು ಅವುಗಳನ್ನು ತಿನ್ನುತ್ತಾ ಸಾಗುತ್ತಿದ್ದನು. ಈ ನಿಗೂಢ ಹಣ್ಣುಗಳನ್ನು ತಿನ್ನುವುದರಿಂದಲೇ ಶಂಕರನು ಇಷ್ಟು ಆರೋಗ್ಯವಾಗಿದ್ದಾನೆ ಎಂದು ಗೂಢಚಾರರು ಊಹಿಸಿದರು. ಮರುದಿನ ರಾಜ ದರ್ಬಾರಿನಲ್ಲಿ ಅವರು ರಾಜನಿಗೆ ಈ ಎಲ್ಲಾ ವಿಷಯವನ್ನು ವಿವರಿಸಿದರು.

ರಾಜನು ಆ ಬೆಟ್ಟಕ್ಕೆ ಹೋಗಿ ಆ ಹಣ್ಣುಗಳನ್ನು ಹುಡುಕುವಂತೆ ಆದೇಶಿಸಿದನು. ಆದರೆ ತುಂಬಾ ಹುಡುಕಾಟ ನಡೆಸಿದ ನಂತರವೂ ಅಲ್ಲಿ ಯಾವುದೇ ಅಸಾಧಾರಣ ಹಣ್ಣುಗಳು ಕಂಡುಬರಲಿಲ್ಲ. ಕೊನೆಗೆ ದಣಿದ ರಾಜನು ಶಂಕರನನ್ನು ಆಸ್ಥಾನಕ್ಕೆ ಹಾಜರುಪಡಿಸುವಂತೆ ಅಪ್ಪಣೆ ಮಾಡಿದನು.

ರಾಜ: “ಶಂಕರ್, ಈ ವಯಸ್ಸಿನಲ್ಲೂ ನಿನ್ನ ಇಷ್ಟೊಂದು ಉತ್ತಮವಾದ ಆರೋಗ್ಯವನ್ನು ನೋಡಿ ನಮಗೆ ಸಂತೋಷವಾಗಿದೆ. ಹೇಳು, ನಿನ್ನ ಈ ಆರೋಗ್ಯದ ರಹಸ್ಯವೇನು?” ಶಂಕರನು ಸ್ವಲ್ಪ ಸಮಯ ಯೋಚಿಸಿ ನಂತರ ಹೇಳಿದನು, “ಮಹಾರಾಜರೇ, ನಾನು ಪ್ರತಿದಿನ ಬೆಟ್ಟಕ್ಕೆ ಹೋಗಿ ಒಂದು ನಿಗೂಢ ಹಣ್ಣನ್ನು ತಿನ್ನುತ್ತೇನೆ, ಅದೇ ನನ್ನ ಆರೋಗ್ಯದ ರಹಸ್ಯ.” ರಾಜ: “ಸರಿ ಹಾಗಾದರೆ, ನಮ್ಮನ್ನೂ ಅಲ್ಲಿಗೆ ಕರೆದುಕೊಂಡು ಹೋಗು ಮತ್ತು ಅದು ಯಾವ ಹಣ್ಣು ಎಂದು ತೋರಿಸು.”

ಎಲ್ಲರೂ ಬೆಟ್ಟದ ಕಡೆಗೆ ಪ್ರಯಾಣ ಬೆಳೆಸಿದರು. ಅಲ್ಲಿಗೆ ತಲುಪಿದ ನಂತರ ಶಂಕರನು ಅವರನ್ನು ಒಂದು ಬಾರೆ ಹಣ್ಣಿನ (ಬೆರ್ರಿ) ಮರದ ಬಳಿಗೆ ಕರೆದೊಯ್ದನು ಮತ್ತು ಅದರ ಹಣ್ಣುಗಳನ್ನು ತೋರಿಸುತ್ತಾ, “ಪ್ರಭುಗಳೇ, ನಾನು ಪ್ರತಿದಿನ ತಿನ್ನುವ ಹಣ್ಣು ಇದೇ” ಎಂದನು. ರಾಜನು ಕೋಪಗೊಳ್ಳುತ್ತಾ, “ನೀನು ನಮ್ಮನ್ನು ಮೂರ್ಖರನ್ನಾಗಿ ಮಾಡುತ್ತಿದ್ದೀಯಾ? ಈ ಹಣ್ಣನ್ನು ಪ್ರತಿದಿನ ಸಾವಿರಾರು ಜನರು ತಿನ್ನುತ್ತಾರೆ, ಆದರೆ ಅವರ್ಯಾರೂ ನಿನ್ನಂತೆ ಆರೋಗ್ಯವಾಗಿಲ್ಲವೇಕೆ?” ಎಂದು ಕೇಳಿದನು.

ಶಂಕರನು ವಿನಮ್ರತೆಯಿಂದ ಉತ್ತರಿಸಿದನು, “ಮಹಾರಾಜರೇ, ಪ್ರತಿದಿನ ಸಾವಿರಾರು ಜನರು ತಿನ್ನುವ ಹಣ್ಣು ಕೇವಲ ಬಾರೆ ಹಣ್ಣು ಮಾತ್ರವಾಗಿರುತ್ತದೆ. ಆದರೆ ನಾನು ತಿನ್ನುವ ಹಣ್ಣು ಕೇವಲ ಹಣ್ಣಲ್ಲ... ಅದು ನನ್ನ ಶ್ರಮದ ಫಲವಾಗಿರುತ್ತದೆ! ಇದನ್ನು ತಿನ್ನಲು ನಾನು ಪ್ರತಿದಿನ ಬೆಳಿಗ್ಗೆ ಹತ್ತು ಮೈಲಿ ನಡೆದುಕೊಂಡು ಬರುತ್ತೇನೆ, ಇದರಿಂದ ನನ್ನ ದೇಹಕ್ಕೆ ಒಳ್ಳೆಯ ವ್ಯಾಯಾಮವಾಗುತ್ತದೆ. ಇನ್ನು ಮುಂಜಾನೆಯ ಶುದ್ಧ ಗಾಳಿಯು ನನಗೆ ಔಷಧಿಯಂತೆ ಕೆಲಸ ಮಾಡುತ್ತದೆ. ಬಸ್, ಇದೇ ನನ್ನ ಆರೋಗ್ಯದ ರಹಸ್ಯ.”

ರಾಜನಿಗೆ ಶಂಕರನ ಮಾತು ಅರ್ಥವಾಯಿತು. ಅವನು ಶಂಕರನಿಗೆ ಚಿನ್ನದ ನಾಣ್ಯಗಳನ್ನು ನೀಡಿ ಗೌರವಿಸಿದನು ಮತ್ತು ತನ್ನ ಪ್ರಜೆಗಳಿಗೂ ಸಹ ದೈಹಿಕ ಶ್ರಮ ವಹಿಸುವಂತೆ ಬುದ್ಧಿವಾದ ಹೇಳಿದನು.

**ಈ ಕಥೆಯ ನೀತಿ:**

ಗೆಳೆಯರೇ, ಇಂದು ತಂತ್ರಜ್ಞಾನವು ನಮ್ಮ ಜೀವನವನ್ನು ಅತ್ಯಂತ ಸರಳಗೊಳಿಸಿದೆ. ಮೊದಲೆಲ್ಲಾ ನಾವು ಸಣ್ಣ–ದೊಡ್ಡ ಕೆಲಸಗಳಿಗೂ ಮನೆಯಿಂದ ಹೊರಗೆ ಹೋಗಲೇಬೇಕಾಗುತ್ತಿತ್ತು, ಆದರೆ ಇಂದು ಇಂಟರ್‌ನೆಟ್ ಮೂಲಕ ಮನೆಯಲ್ಲಿಯೇ ಕುಳಿತು ಎಲ್ಲಾ ಕೆಲಸಗಳನ್ನೂ ಮಾಡಿಕೊಳ್ಳುತ್ತಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ ಸಿಗುತ್ತಿದ್ದ ಅಲ್ಪಸ್ವಲ್ಪ ದೈಹಿಕ ಚಟುವಟಿಕೆಗಳ ಅವಕಾಶಗಳೂ ಇಲ್ಲದಂತಾಗುತ್ತಿವೆ ಮತ್ತು ಇದರ ನೇರ ಪರಿಣಾಮ ನಮ್ಮ ಆರೋಗ್ಯದ ಮೇಲೆ ಬೀರುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆಯ (WHO) ಪ್ರಕಾರ, ಇಂದು ಜಗತ್ತಿನಲ್ಲಿ 20 ವರ್ಷ ಮೇಲ್ಪಟ್ಟ ಶೇಕಡಾ 35 ರಷ್ಟು ಜನರು ಅತಿಯಾದ ತೂಕವನ್ನು (Overweight) ಹೊಂದಿದ್ದಾರೆ ಮತ್ತು ಶೇಕಡಾ 11 ರಷ್ಟು ಜನರು ಬೊಜ್ಜಿನ (Obese) ಸಮಸ್ಯೆಯಿಂದ ಬಳಲುತ್ತಿದ್ದಾರೆ. ಇಂತಹ ಸಮಯದಲ್ಲಿ ನಾವು ನಮ್ಮ ಆರೋಗ್ಯದ ಕಡೆಗೆ ಗಮನ ಹರಿಸಿ, ದೈನಂದಿನ ಜೀವನದಲ್ಲಿ ದೈಹಿಕ ಶ್ರಮಕ್ಕೆ ಆದ್ಯತೆ ನೀಡುವುದು ಅತ್ಯಂತ ಅತ್ಯಗತ್ಯವಾಗಿದೆ.❑

# "ಕ್ರೌರ್ಯದ ಕೈಗಳನ್ನು ಕಡಿದೊಗೆಯಿರಿ"

ಸ್ನೇಹಿತರೇ...

ಇತ್ತೀಚೆಗೆ ರಾಜಸ್ಥಾನದ ಗಂಗಾನಗರದಲ್ಲಿ ಜೂನ್ 18 ರಂದು ಅಪ್ರಾಪ್ತೆಯ ಮೇಲೆ ನಡೆದ ಅತ್ಯಂತ ಭೀಕರ ಅತ್ಯಾಚಾರದ ಘಟನೆ ತೀವ್ರ ಆಕ್ರೋಶಕ್ಕೆ ಕಾರಣವಾಯಿತಲ್ಲದೆ ಇಡೀ ದೇಶವನ್ನು ಬೆಚ್ಚಿಬೀಳಿಸಿತು.

ಅಂದು ಸ್ನೇಹಿತರ ಮನೆಗೆ ಹೋಗಿದ್ದ 13 ವರ್ಷದ ಬಾಲಕಿ ಮನೆಗೆ ಮರಳಲೆಂದು ಆಟೋ ಹತ್ತಿದ್ದಳು. ಮನೆಗೆ ಕರೆದುಕೊಂಡು ಹೋಗಬೇಕಿದ್ದ ಆಟೋ ಚಾಲಕ ರಾಮಲಾಲ್ ಬಾಲಕಿಯನ್ನು ಅಪಹರಿಸಿ, ಹೋಟೆಲ್ ಮಾಲೀಕರಿಗೆ ಮಾರಾಟ ಮಾಡಿದ್ದಾನೆ. ನಂತರ ಸುಮಾರು 5-6 ದಿನಗಳ ಕಾಲ ವಿವಿಧ ಹೋಟೆಲ್‌ಗಳಲ್ಲಿ 30-32 ಜನ ಕಾಮುಕರು ಆ ಬಾಲಕಿಯನ್ನು ಐದು ದಿನಗಳ ಕಾಲ ನಗರದಾದ್ಯಂತ ಹಲವಾರು ಹೋಟೆಲ್‌ಗಳಲ್ಲಿ ಆಕೆಯ ಮೇಲೆ ಪದೇ ಪದೇ ಅತ್ಯಾಚಾರ ಎಸಗಿದ್ದಾರೆ ಎಂದು ತನಿಖಾಧಿಕಾರಿಗಳು ಆರೋಪಿಸಿದ್ದಾರೆ. ಈ ರೀತಿ ನಿರಂತರವಾಗಿ ಅಮಾನುಷ ರೀತಿಯಲ್ಲಿ ನಿರಂತರವಾಗಿ ಲೈಂಗಿಕ ದೌರ್ಜನ್ಯಕ್ಕೆ (Sexual Harassment) ಅಂತ್ಯವಿಲ್ಲವೇ?

ಪಾಪ..ಆ ಮುಗ್ಧ ಬಾಲಕಿಯ ಕಣ್ಣುಗಳಲ್ಲಿ ಬದುಕಿನ ನೂರಾರು ಹೊಂಗನಸುಗಳು, ಗುರಿಗಳನ್ನು ಸಾಧಿಸುವ ಹುರುಪು ಜಿನುಗುತ್ತಿತ್ತು. ಆದರೆ ಪಾಪಿ ಕಾಮುಕರ ಕರಾಳ ಛಾಯೆಯಲ್ಲಿ ನರಕಯಾತನೆಯ ಪರಮಾವಧಿಯನ್ನು ಅನುಭವಿಸಿದ ಆ ಬಾಲಕಿ ಕೊನೆಯುಸಿರೆಳೆದಿದ್ದಾಳೆ.

ಈ ಘೋರ ಕೃತ್ಯವು ನಮ್ಮೆಲ್ಲರ ಹೃದಯವನ್ನು ತುಂಬಾ ತೀವ್ರವಾಗಿ ಕಲಕುತ್ತದೆ. ಈ ದುರಂತವು ಇಡೀ ದೇಶವನ್ನೇ ಮತ್ತೊಮ್ಮೆ ಬೆಚ್ಚಿ ಬೀಳಿಸಿದೆ.

ಪಾಪ...ಹದಿಹರೆಯದ ಹೊಸ್ತಿಲಲ್ಲಿ ಕಾಲಿಡುವ ಕನ್ಯೆಯನ್ನು ಕ್ರೌರ್ಯದ ಕೈಗಳು ಹೃದಯವಿದ್ರಾವಕವಾಗಿ ಕಸಿದುಕೊಂಡವು... ಹೂವಂತೆ ಅರಳುವ ಮುನ್ನವೇ ಹೊಸಕಿ ಹಾಕಿದ ಆ ಕ್ರೂರ ಕೈಗಳಿಗೆ ಇನ್ನು ಮುಂದೆ ಖಂಡಿತವಾಗಿ ಎಲ್ಲೂ ಜಾಗವಿಲ್ಲ. ನಮ್ಮ ಸಮಾಜದ ಮುಗ್ಧ ಹೂವುಗಳನ್ನು ಈ ರೀತಿಯ ಅಸಹನೀಯ ಪರಿಸ್ಥಿತಿಗಳಲ್ಲಿ ನಲುಗಿಸಿ, ದುರ್ಬಲಗೊಳಿಸಿ, ನಶಿಸುತ್ತಿರುವ ಕೈಗಳನ್ನು ಕಡೆದೊಗೆಯುವ ಧೈರ್ಯ ಮತ್ತು ಕಠಿಣ ಕ್ರಮಗಳನ್ನು ತಕ್ಷಣ ತೆಗೆದುಕೊಳ್ಳಲೇಬೇಕು.

ಈ ಕೈಗಳು ಕೇವಲ ಒಂದು ಕುಟುಂಬವನ್ನು ಮಾತ್ರವಲ್ಲ, ಇಡೀ ಸಮಾಜದ ಭವಿಷ್ಯವನ್ನೇ ಕತ್ತಲುಗೊಳಿಸುತ್ತಿವೆ. ಕಾನೂನುಗಳು ಈ ಕ್ರೌರ್ಯದ ಕೈಗಳಿಗೆ ಖಡ್ಗವಾಗಲೇಬೇಕು. ಈ ಘಟನೆಯು ನಮ್ಮ ಹೃದಯವನ್ನು ತುಂಬಾ ತೀವ್ರವಾಗಿ ಕಲಕುತ್ತದೆ, ಸಿಟ್ಟು ಬರುತ್ತದೆ. ಇದು 2012ರ ಡಿಸೆಂಬರ್ 16ರ ನಿರ್ಭಯಾ ದುರಂತವನ್ನು ನೆನಪಿಸುತ್ತಾ ನಮ್ಮ ಮನಸ್ಸನ್ನು ಮತ್ತೆ ನೋವಿನಲ್ಲಿ ತುಂಬಿಸುವುದು ಬಹಳ ವಿಷಾದನೀಯ ವಿಷಯ. ಇಂತಹ ನೋವು ಹಳೆಯದಾಗಿರಬಹುದು, ಹೊಸದಾಗಿರಬಹುದು... ಆದರೆ ಅದು ಮತ್ತೆ ಬಂದು ಹೃದಯವನ್ನು ತುಂಬುವಾಗ ತುಂಬಾ ಭಾರವಾಗುತ್ತದೆ ಮತ್ತು ಅಸಹನೀಯವಾಗುತ್ತದೆ ಅಲ್ಲವೇ?

ಇನ್ನೂ ಅದೆಷ್ಟು ಮುಗ್ಧರು ಬಲಿಯಾಗಬೇಕು? ಇನ್ನೂ ಎಷ್ಟು ದುರಂತಗಳ ನಂತರ ನಾವು ಎಚ್ಚರಗೊಳ್ಳುವುದು?

ಆ ಅಮಾಯಕ ಮುಗ್ಧ ಹುಡುಗಿಯ ಮೇಲೆ ದುಷ್ಕರ್ಮಿಗಳು ದಾಳಿ ಮಾಡುವಾಗ ತಮ್ಮ ಮನೆಯಲ್ಲಿದ್ದ ತಾಯಿ, ಹೆಂಡತಿ, ಸಹೋದರಿಯರ ಮತ್ತು ಮಕ್ಕಳ ಮುಖಗಳು ಕಾಣಿಸಲಿಲ್ಲವೇ?

ಆ ದುಷ್ಕರ್ಮಿಗಳು ಕೃತ್ಯವೆಸಗುವಾಗ ಒಂದು ಕ್ಷಣವಾದರೂ ಅವರ ಮನಸ್ಸು ನಡುಗಲಿಲ್ಲವೇ? ತಮ್ಮ ಸ್ವಂತ ಮಕ್ಕಳ ಮುಗ್ಧ ನಗುವನ್ನು ನೆನೆಸಿಕೊಂಡು ಈ ಅಮಾಯಕ ಬಾಲಕಿಯ ಕಣ್ಣೀರಿಗೆ ಕಾರಣರಾಗಲು ಅವರೆಲ್ಲರ ಮನಸು ಹೇಗೆ ಒಪ್ಪಿತು?

ಈ ಪ್ರಶ್ನೆ ಪ್ರತಿ ಅಪರಾಧಿಯ ಮನಸ್ಸನ್ನು ಕೊರೆಯಬೇಕು. ಮನುಷ್ಯತ್ವವನ್ನೇ ಕಳೆದುಕೊಂಡ ಇಂತಹ ಕ್ರೌರ್ಯಕ್ಕೆ ಖಂಡಿತಾ ಯಾವುದೇ ಕ್ಷಮೆಯಿಲ್ಲ. ಮಕ್ಕಳ ನಗುವನ್ನು ರಕ್ಷಿಸದ ಸಮಾಜ ಎಂದಿಗೂ ಸುರಕ್ಷಿತವಲ್ಲ.

ಈ ನೋವಿನ ನಡುವೆಯೂ ನಮಗೆ ಒಂದು ಆಶಾಕಿರಣ ಎಂದರೆ ಭಾರತದಲ್ಲಿ ಮಹಿಳೆಯರ ಮತ್ತು ಬಾಲಕಿಯರ ರಕ್ಷಣೆಗಾಗಿ ರಚಿಸಲಾಗಿರುವ ಶಕ್ತಿಶಾಲಿ ಕಾನೂನುಗಳು.

1. ನಿರ್ಭಯಾ ಕಾಯ್ದೆ (ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಆಕ್ಟ್ 2013) ನಿರ್ಭಯಾ ಘಟನೆಯ ಆಘಾತದ ನಂತರ ಜಾರಿಗೊಂಡ ಈ ಕಾಯ್ದೆಯು ಅತ್ಯಾಚಾರದ ವ್ಯಾಖ್ಯೆಯನ್ನು ವಿಸ್ತರಿಸಿ, ಗ್ಯಾಂಗ್ ರೇಪ್‌ಗೆ ಕನಿಷ್ಠ 20 ವರ್ಷ ಅಥವಾ ಜೀವಾವಧಿ ಶಿಕ್ಷೆಯ ಕಠಿಣ ನಿಯಮ ತಂದಿದೆ. ಶಿಕ್ಷೆಯ ಖಡ್ಗವು ತ್ವರಿತವಾಗಿ ಬೀಳಲಿ, ನ್ಯಾಯದ ದೀಪ ತಡವಾಗದಂತೆ ಬೆಳಗಲಿ!

2. POCSO ಆಕ್ಟ್ 2012. ಮುಗ್ಧ ಬಾಲಕಿಯರ ಮೇಲಿನ ಲೈಂಗಿಕ ಅಪರಾಧಗಳ ವಿರುದ್ಧದ ಈ ವಿಶೇಷ ಕಾಯ್ದೆಯು ನಮ್ಮ ಮಕ್ಕಳನ್ನು ರಕ್ಷಿಸುವ ಭರವಸೆಯಾಗಿದೆ.

3. ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005. ಮನೆಯೊಳಗಿನ ಹಿಂಸೆಯಿಂದಲೂ ಮಹಿಳೆಯರನ್ನು ರಕ್ಷಿಸುವ ಈ ಕಾಯ್ದೆ ಮನಸ್ಸಿಗೆ ಸ್ವಲ್ಪ ಸಾಂತ್ವನ ನೀಡುತ್ತದೆ.

4. ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆಗಟ್ಟುವ ಕಾಯ್ದೆ 2013. ಈ ಕಾಯ್ದೆಯು ಮಹಿಳೆಯರು ತಮ್ಮ ಕೆಲಸದ ಸ್ಥಳದಲ್ಲಿ ಭಯವಿಲ್ಲದೆ, ಆತ್ಮವಿಶ್ವಾಸದಿಂದ ಕಾರ್ಯ ನಿರ್ವಹಿಸುವಂತೆ ಪ್ರೋತ್ಸಾಹಿಸುತ್ತದೆ. ಯಾವುದೇ ರೀತಿಯ ಲೈಂಗಿಕ ಕಿರುಕುಳ, ಮಾತು, ಸನ್ನೆ, ಸ್ಪರ್ಶ ಅಥವಾ ಇತರ ರೂಪಗಳಲ್ಲಿ ಬಂದರೂ ಅದನ್ನು ಗಂಭೀರವಾಗಿ ಪರಿಗಣಿಸುವುದು ಮತ್ತು ತ್ವರಿತ ಕ್ರಮ ತೆಗೆದುಕೊಳ್ಳುವುದು ಈ ಕಾಯ್ದೆಯ ಮುಖ್ಯ ಉದ್ದೇಶ. ಪ್ರತಿ ಉದ್ಯೋಗಿಯು ಈ ಕಾಯ್ದೆಯ ಬಗ್ಗೆ ತಿಳಿದಿರುವುದು ಅಗತ್ಯ, ಏಕೆಂದರೆ ಸುರಕ್ಷಿತ ಕೆಲಸದ ವಾತಾವರಣವೇ ಮಹಿಳೆಯರ ಸಬಲೀಕರಣಕ್ಕೆ ಮೂಲಾಧಾರ. ಈ ಕಾಯ್ದೆಗಳ ಜೊತೆಗೆ ವರದಕ್ಷಿಣೆ ತಡೆ, ಬಾಲ್ಯವಿವಾಹ ತಡೆ ಮತ್ತು ಭಾರತೀಯ ನ್ಯಾಯ ಸಂಹಿತೆಯಂತಹ ಕಾನೂನುಗಳು ಮಹಿಳೆಯರ ಹಕ್ಕುಗಳನ್ನು ಬಲಪಡಿಸಿವೆ. ಕಾನೂನುಗಳು ಕಾಗದದ ಮೇಲೆ ಮಾತ್ರವಲ್ಲ, ಪ್ರತಿ ಮನೆಯಲ್ಲಿ, ಪ್ರತಿ ಬೀದಿಯಲ್ಲಿ ಜೀವಂತವಾಗಬೇಕು. ಈ ಕಾನೂನುಗಳೆಲ್ಲ ಕಠಿಣವಾಗಿವೆ ಹೌದು, ಆದರೆ ಅನುಷ್ಠಾನ ಕಠಿಣವಾಗದಿದ್ದರೇನು ಪ್ರಯೋಜನ ಹೇಳಿ?

ಹಾಗಾಗಿ ಇಂತಹ ಕ್ರೌರ್ಯದ ಕೈಗಳನ್ನು ಕಡೆದೊಗೆಯಲೇಬೇಕು, ಪಾಪಿಗಳು ಕ್ಷಣ ಕ್ಷಣವೂ ನರಕಯಾತನೆ ಅನುಭವಿಸಲೇಬೇಕು. ಕೋರ್ಟ್ ಆದೇಶ ಪಡೆದು ಬಾಲಕಿಯನ್ನು ನಿರಂತರವಾಗಿ ಅತ್ಯಾಚಾರ ಮಾಡಿದ 4 ಹೋಟೆಲ್‌ಗಳನ್ನು ಪೋಲೀಸರು ಧ್ವಂಸ ಮಾಡಿದ್ದಾರೆ.



ಆ 30 ಜನರನ್ನು ಬಂಧಿಸಿ ಜೈಲಿಗೆ ಕಳಿಸಿದ್ದಾರೆ, ಆದರೆ ಕೋರ್ಟ್ ಕಚೇರಿ ಎನ್ನದೇ ಅವರಿಗೆ ಮೊದಲು ಚಿತ್ರಹಿಂಸೆ ಕೊಟ್ಟು, ಗುಂಡಿಟ್ಟು ಮುಗಿಸಬೇಕು. ಇಂತಹ ಅಪರಾಧ ಎಸುಗಿದರೆ ಎಂತಹ ಶಿಕ್ಷೆ ವಿಧಿಸಲಾಗುತ್ತದೆ ಎಂಬುವ ಭೀತಿ ಹುಟ್ಟಬೇಕು. ತಮ್ಮ ಕೃತ್ಯದ ಭಯಂಕರ ಪರಿಣಾಮವನ್ನು ಪ್ರತಿ ಕ್ಷಣವೂ ಅನುಭವಿಸುತ್ತಾ, ಯಾವುದೇ ಶಾಂತಿ ಕಾಣದಂತೆ ಅವರು ನರಕದಲ್ಲಿ ಬಳಲಬೇಕು. ಅವರ ಮನಸ್ಸು ಎಂದಿಗೂ ಸಮಾಧಾನ ಕಾಣದಂತೆ ಮಾಡುವ ಕಠಿಣ ಶಿಕ್ಷೆಯೇ ನ್ಯಾಯ! ಇಲ್ಲ ಕಾನೂನು ಪ್ರಕಾರ ಶೀಘ್ರಾತಿ ಶೀಘ್ರದಲ್ಲೇ ಆರೋಪಿಗಳಿಗೆ ಗಲ್ಲು ಶಿಕ್ಷೆ ಕೊಡಿಸುವ ಕೆಲಸ ಮಾಡಬೇಕು.

ಪ್ರತಿಯೊಬ್ಬರು ಜಾಗೃತರಾಗಿ, ಧ್ವನಿ ಎತ್ತಿ ಹೋರಾಡೋಣ, ಈ ದುರಂತಗಳು ಇನ್ನು ಮುಂದೆ ಪುನರಾವರ್ತನೆ ಆಗದಂತೆ ನಾವೆಲ್ಲರೂ ಒಗ್ಗಟ್ಟಿನಿಂದ ನಿಲ್ಲೋಣ. ಪ್ರತಿಯೊಬ್ಬ ಪಾಲಕರು ತಮ್ಮ ಮಕ್ಕಳಿಗೆ ಆತ್ಮನಿರ್ಭರರಾಗಲು ತರಬೇತಿ ನೀಡಿ.

ಕಾನೂನುಗಳು ರಕ್ಷಿಸಿದರೂ, ಪ್ರತಿಯೊಬ್ಬ ಪಾಲಕರು ತಮ್ಮ ಮಕ್ಕಳು ವಿಶೇಷವಾಗಿ ಬಾಲಕಿಯರು ಆತ್ಮನಿರ್ಭರರಾಗಿ, ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಧೈರ್ಯ, ಜಾಗೃತಿ ಮತ್ತು ಕೌಶಲ್ಯಗಳನ್ನು ಕಲಿಸಿ. ಮನೆಯಿಂದಲೇ ಸುರಕ್ಷತಾ ತರಬೇತಿ, ಧೈರ್ಯದ ಪಾಠಗಳು ಮತ್ತು ತುರ್ತು ಸಹಾಯ ಸಂಖ್ಯೆಗಳ ಜ್ಞಾನ ನೀಡುವುದು ಪ್ರತಿ ಪಾಲಕರ ಕರ್ತವ್ಯವಾಗಬೇಕು. ಇವೆಲ್ಲ ಸಮಾಜದ ಮೂಲಭೂತ ಬದಲಾವಣೆಗೆ ಖಂಡಿತ ನಾಂದಿ ಹಾಡುತ್ತವೆ.

ಹದಿಹರೆಯದ ಹೂವುಗಳು ಭಯದ ನೆರಳಿನಲ್ಲಿ ಅರಳದಂತೆ ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಮತ್ತು ಜವಾಬ್ದಾರಿಯಾಗಿದೆ. ಹೆಣ್ಣೇ ಇರಲಿ ಗಂಡೇ ಇರಲಿ ಇಂತಹ ದುರಂತಗಳಿಗೆ ಗುರಿಯಾಗುವುದನ್ನು ಎಲ್ಲರೂ ಸೇರಿ ಖಂಡಿತ ತಪ್ಪಿಸೋಣ.

ಆ ಮುಗ್ಧ ಬಾಲಕಿಯ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಬೇಡಿಕೊಳ್ಳುತ್ತೇನೆ. ❑

**ಸವಿತಾ ಇನಾಮದಾರ್**

# ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ದೆಹಲಿ ಪೊಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯು ಆಯೋಜಿಸಿದ್ದ ಯುಗಾದಿ ಮಿಲನ




ದಿನಾಂಕ 22.03.2026 ರ ಭಾನುವಾರ ಸಾಯಂಕಾಲ 4 ಗಂಟೆಗೆ ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ದೆಹಲಿ ಪೊಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯು ಆಯೋಜಿಸಿದ್ದ ಯುಗಾದಿ ಮಿಲನ ಕಾರ್ಯಕ್ರಮವನ್ನು ಪೊಲೀಸ್ ಕುಟುಂಬದ ಸದಸ್ಯರು ಹಾಗು ಮಹಿಳೆಯರು ಮಕ್ಕಳು ಒಗ್ಗಟ್ಟಾಗಿ ಅದ್ಭುತವಾಗಿ ನೆರವೇರಿಸಿದ್ದರು. ಹಾಗೇಯೇ ದೆಹಲಿ ಎನ್‌ಸಿಆರ್ ಕನ್ನಡಿಗರ ಅನೇಕ ಸಂಘ ಸಂಸ್ಥೆಗಳ ಸದಸ್ಯರು ಹಾಗೂ ಪರಿವಾರದವರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿ ನಮ್ಮ ಕಾರ್ಯಕ್ರಮಕ್ಕೆ ಮೆರಗು ತಂದರು. ಸ್ವರಾಂಜಲಿ ತಂಡದಿಂದ ಗಿರೀಶ್ ರಚಿಸಿ ನಿರ್ದೇಶಿಸಿದ ಕಿರು ನಾಟಕ 'ಹೆತ್ತಕರುಳು' ಪ್ರೇಕ್ಷಕರ ಮನಗೆದ್ದು ಪ್ರೇಕ್ಷಕರ ಕಣ್ಣಲ್ಲಿ ನೀರು ತರಿಸಿತು. ಗೆಳೆಯ ಮಹದೇವ್‌ರವರ ಮತ್ತೊಂದು ನಾಟಕ 'ಕೀಳ್ಯಾವುದೋ ಮೇಲಾವುದೋ' ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಬಳಗದ ಗೆಳೆಯರ ಪ್ರಸ್ತುತಪಡಿಸಿ ಪ್ರೇಕ್ಷಕ ಮನಗೆದ್ದಿದ್ದಾರೆ. ಈ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಶಾಲತಾ ಮಹದೇವ್‌ರವರು ತುಂಬಾ ಅಚ್ಚುಕಟ್ಟಾಗಿ ನೆರವೇರಿಸಿದರು. ದೆಹಲಿಯ ಕನ್ನಡಿಗರನ್ನು ಒಗ್ಗೂಡಿಸಿ ಸುಮಾರು 30 ಕ್ಕೂ ಕಾರ್ಯಕ್ರಮಗಳನ್ನು ಮಾಡಿಸುವುದು ಸುಲಭದ




ಮಾತಲ್ಲ. ನಮ್ಮ ಪೋಲೀಸ್ ಪರಿವಾದ ಮಹಿಳೆಯರು ಜೊತೆಗೂಡಿ ಕಾರ್ಯಕ್ರಮ ಯಶಸ್ವಿಯಾಗಲು ಕಾರಣರಾದರು. ನಮ್ಮೆಲ್ಲಾ ಕೆಲಸಕ್ಕೆ ಯಾವುದೇ ರೀತಿಯ ಅಡೆ ತಡೆ ಬಾರದಂತೆ ನೋಡಿಕೊಂಡ ಅಧ್ಯಕ್ಷರಾದ ಎಚ್.ಕೆ. ಮಂಜುನಾಥ್‌ರವರ ಕಾರ್ಯವೈಖರಿ ಶ್ಲಾಘನೀಯ. ಅವರ ಜೊತೆ ನಮ್ಮ ಕಾರ್ಯಕಾರಿ ಸಮಿತಿ ಜೊತೆ ನೀಡಿ ಕೈ ಜೋಡಿಸಿದ್ದು ಮರೆಯುವಂತಿಲ್ಲ. ಕಾರ್ಯಕ್ರಮ ಯಶಸ್ವಿಯಾಗಲು ಕಾರಣಕರ್ತರಾದ ನಮ್ಮ ಎಲ್ಲಾ ದೆಹಲಿ ಎನ್‌ಸಿಆರ್ ಕನ್ನಡಿಗರಿಗೆ ಧನ್ಯವಾದಗಳು ಕಾರ್ಯಕ್ರಮಕ್ಕೆ ಸಹಕಾರ ನೀಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ ರಾಧಾಕೃಷ್ಣ ಹಾಗೂ ಕಾರ್ಯಕಾ ಸಮಿತಿಯ ಎಲ್ಲಾ ಪದಾಧಿಕಾರಿಗಳು, ಸದಸ್ಯರು ಮತ್ತು ಸಂಘದ ಸಿಬ್ಬಂದಿಗಳಿಗೆ ಧನ್ಯವಾದಗಳು. ಅಚ್ಚುಕಟ್ಟಾಗಿ ಊಟದ ವ್ಯವಸ್ಥೆ ಮಾಡಿದ ಕೆಎಫ್‌ಸಿ ಯ ಮ್ಯಾನೇಜರ್ ಶರೀಫ್‌ರವರಿಗೆ ಧನ್ಯವಾದಗಳು. ನಮ್ಮ ನಿಮ್ಮೆಲ್ಲರ ಈ ಕಾರ್ಯಕ್ರಮಕ್ಕೆ ಪತ್ಯೇಕವಾಗಿ ಪರೋಕ್ಷವಾಗಿ ಕೈ ಜೋಡಿಸಿದ್ದ ತಮ್ಮೆಲ್ಲರಿಗೂ ಧನ್ಯವಾದಗಳು. ❑

***ಎಸ್.ಡಿ. ಶ್ರೀನಿವಾಸ್***

# ಗುರುವಂದನಾ ಕಾರ್ಯಕ್ರಮ



ಶಿಕ್ಷಕಿ, ನೃತ್ಯಗಾರ್ತಿ, ನೃತ್ಯ ಸಂಯೋಜಕಿ, ಸಂಗೀತಗಾರ್ತಿ ಹೀಗೆ ಬಹುಮುಖ ಕಲಾವಿದೆಯಾಗಿ ಜನಮನ್ನಣೆ ಪಡೆದ ಗುರುವರ್ಯರಾದ ಶ್ರೀಮತಿ ರಾಜೇಶ್ವರಿ ಭಟ್ ಅವರಿಗೆ ಗುರುವಂದನಾ ಕಾರ್ಯಕ್ರಮವನ್ನು ಅರ್ಪಿಸಲಾಯಿತು. ನವದೆಹಲಿಯ ಮಯೂರ್ ವಿಹಾರ್‌ನಲ್ಲಿರುವ ಶ್ರೀಮತಿ ರಾಜೇಶ್ವರಿ ಭಟ್ ಸ್ವಗೃಹದಲ್ಲಿ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮದಲ್ಲಿ ಗುರುವಂದನೆಯನ್ನು ಸ್ವೀಕರಿಸಿ ಮಾತನಾಡಿದ ಅವರು ವಿದ್ಯೆಯ ಜೊತೆಗೆ ಬದುಕಿಗೆ ಮೌಲ್ಯಗಳನ್ನು ಧಾರೆಯೆರುವ ಗುರುವಿಗೆ ಭಾರತೀಯ ಸಂಸ್ಕೃತಿಯಲ್ಲಿ ಮಹತ್ವದ ಸ್ಥಾನವಿದೆ. ಜೀವನದಲ್ಲಿ ಹೊಸ ಪರಿವರ್ತನೆಗೆ, ಅಂತರಂಗ ಶುದ್ಧಿಗೆ ಗುರುವಿನ ಚಿಂತನೆ ಅತ್ಯಗತ್ಯವಾಗಿದೆ. ಗುರು ಎಂಬುವುದು ಕೇವಲ ಪದವಿಯಲ್ಲ, ಅದೊಂದು ಸಿದ್ಧಿ. ಗುರುವಿನ ಆಶೀರ್ವಾದವಿದ್ದರೆ ವ್ಯಕ್ತಿಯು ಉನ್ನತಿಯ ಕಡೆಗೆ ಸಾಗುತ್ತಾನೆ ಎಂದರು.

ಮೂಲತಃ ಕಾಸರಗೋಡಿನವರಾದ ಇವರು ಕಳೆದ 30 ವರ್ಷಗಳಿಂದ ದೆಹಲಿಯಲ್ಲಿ ವಾಸವಾಗಿದ್ದು ಪ್ರಸ್ತುತ ಮಯೂರ್ ವಿಹಾರ್‌ನಲ್ಲಿರುವ ತಮ್ಮ ತರಬೇತಿ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಈ ತರಬೇತಿ ಕೇಂದ್ರದಲ್ಲಿ ಸುಮಾರು 75 ವಿದ್ಯಾರ್ಥಿಗಳು ಭರತನಾಟ್ಯ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತ ಅಭ್ಯಾಸ ಮಾಡುತ್ತಿದ್ದಾರೆ. ಈವರೆಗೆ 3000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇವರಿಂದ ತರಬೇತಿ ಪಡೆದಿರುತ್ತಾರೆ. ತಮ್ಮ ಕಲಾಸೇವೆಗೆ ಕರ್ನಾಟಕ ಶಿರೋಮಣಿ, ಗಾನ ಸರಸ್ವತಿ, ಕಲಾ ರತ್ನ, ನೃತ್ಯ ಸೇವಾಮಣಿ, ಕಲಾ ತಿಲಕ, ಕಲಾ ಭೂಷಣ, ವಿಶಿಷ್ಟ ಕನ್ನಡಿಗ ಮುಂತಾದ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ನೃತ್ಯ ಶಿಕ್ಷಕಿ ಹರ್ಷಿತಾ ಕುಶಾಲಪ್ಪ ಗುರುಪೂಜೆ ನಡೆಸಿಕೊಟ್ಟರು. ಶಿಕ್ಷಕರಾದ ನಾಗರಾಜ್ ಎಂ. ಸ್ವಾಗತಿಸಿದರು. ಶ್ರೀಮತಿ ರಂಜಿತಾ ಆರ್. ಸನ್ಮಾನ ಪತ್ರ ವಾಚಿಸಿದರು. ಹೆಚ್.ಎಸ್. ತೇಲಿ ವಂದಿಸಿದರು. ಶ್ರೀಮತಿ ಜ್ಯೋತಿ ಎಸ್. ಪೊದ್ದಾರ್, ಶ್ರೀಮತಿ ಲಾವಣ್ಯ ಬಸವರಾಜ್, ಶ್ರೀಮತಿ ಶೋಭಾ ಹೆಚ್. ತೇಲಿ, ಶೇಖರ್ ಎಂ. ಸಹಕರಿಸಿದರು. ಅರವಿಂದ ಬಿಜ್ಜೈ ಕಾರ್ಯಕ್ರಮ ನಿರೂಪಿಸಿದರು.❑

***ಅರವಿಂದ ಬಿಜ್ಜೈ***

## ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಪತ್ನಿ ನಿಧನ



ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಪತ್ನಿ 85 ವರ್ಷದ ಚೆನ್ನಮ್ಮ ನಿಧನರಾಗಿದ್ದಾರೆ. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರನ್ನು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ದೇವೇಗೌಡರ ಪ್ರತಿಯೊಂದು ಯಶಸ್ಸಿನ ಹಿಂದೆ ದೊಡ್ಡ ಶಕ್ತಿಯಾಗಿ ನಿಂತಿದ್ದ ಚೆನ್ನಮ್ಮ ಅವರು ನಾಲ್ಕು ದಿನಗಳಿಂದ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಕಡೆಗೂ ಚಿಕಿತ್ಸೆ ಫಲಿಸದೇ 18.07.2026 ರಂದು ಹೃದಯಾಘಾತವಾಗಿ ವಿಧಿವಶರಾಗಿದ್ದಾರೆ.

ಹಾಸನ ತಾಲೂಕಿನ ಮುತ್ತಿಗೆ ಹಿರೇಹಳ್ಳಿಯ ಚೆನ್ನಮ್ಮ ಅವರು 1954 ಮೇ 25 ರಂದು ಹೆಚ್.ಡಿ. ದೇವೇಗೌಡರ ಜೊತೆ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದರು. 1954ರಲ್ಲಿ ಗೌಡರಿಗೆ 21 ವರ್ಷ ತುಂಬಿತ್ತು. ಅವರ ತಂದೆ–ತಾಯಿ ಅದೇ ತಾಲೂಕಿನ ಮುತ್ತಿಗೆ ಹಿರೇಹಳ್ಳಿಯ ಚೆನ್ನಮ್ಮನೊಂದಿಗೆ ಗೌಡರ ಮದುವೆ ನೆರವೇರಿಸಿದ್ದರು. ಮದುವೆಯಾಗುವಾಗ ಚೆನ್ನಮ್ಮನವರಿಗೆ 17 ವರ್ಷ ವಯಸ್ಸು.

ಮಾಜಿ ಪ್ರಧಾನಿ ಸನ್ಮಾನ್ಯ ಶ್ರೀ ಹೆಚ್.ಡಿ. ದೇವೆಗೌಡರ ಸುದೀರ್ಘ ರಾಜಕೀಯ ಜೀವನದ ಏಳು–ಬೀಳುಗಳಲ್ಲಿ ನಿರಂತರವಾಗಿ ಬೆಂಬಲವಾಗಿ ನಿಂತು, ಇಡೀ ಕುಟುಂಬಕ್ಕೆ ಮಾತೃಶಕ್ತಿಯಾಗಿದ್ದ ಸರಳ ಸಜ್ಜನಿಕೆಯ ಮಾತೃ ಮೂರ್ತಿ ಶ್ರೀಮತಿ ಚೆನ್ನಮ್ಮನವರ ಅಗಲಿಕೆ ಗೌಡರ ಇಡೀ ಕುಟುಂಬಕ್ಕೆ ದೊಡ್ಡ ನಷ್ಟವಾಗಿದೆ. ಭಗವಂತನು ಮೃತರ ಪವಿತ್ರ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲಿ ಹಾಗೂ ಶ್ರೀ ದೇವೇಗೌಡರು, ಶ್ರೀ ಕುಮಾರಸ್ವಾಮಿ ಮತ್ತು ಅವರ ಇಡೀ ಕುಟುಂಬಕ್ಕೆ ಈ ದುಃಖವನ್ನು ತಡೆದುಕೊಳ್ಳುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತಾ ದೆಹಲಿ ಕರ್ನಾಟಕ ಸಂಘ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ತೀವ್ರ ಸಂತಾಪ ಹಾಗೂ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.❑

## ಕತೆಗಾರ್ತಿ–ಸಿ.ಎನ್. ಮುಕ್ತಾ ನಿಧನ



ಸಾಹಿತ್ಯದ ಪರಿಸರ, ಸಾಹಿತಿಗಳ ವಂಶಕ್ಕೆ ಸೇರಿದ ಸಿ.ಎನ್. ಮುಕ್ತಾರವರು ಚಿತ್ರದುರ್ಗದಲ್ಲಿ 1951ರ ಏಪ್ರಿಲ್ 30ರಂದು ಜನಿಸಿದರು. ತಂದೆ ಪ್ರೌಢ ಶಾಲಾ ಮುಖ್ಯೋಪಾಧ್ಯಾಯರಾಗಿದ್ದ ಸಿ.ಬಿ. ನರಸಿಂಹಮೂರ್ತಿಗಳು, ಇವರ ಅಣ್ಣ ಪ್ರಖ್ಯಾತ ರಂಗಭೂಮಿ, ಆಕಾಶವಾಣಿ ನಟರಾಗಿದ್ದ ಸಿ.ಬಿ. ಜಯರಾಯರು. ಮುಕ್ತಾ ಅವರ ಸಾಹಿತ್ಯ ಕೃಷಿಗೆ ನಿರಂತರ ಪ್ರೋತ್ಸಾಹ ನೀಡಿದವರು ಅವರ ತಾಯಿ ಕಮಲಮ್ಮ.

ಪ್ರಾರಂಭಿಕ ಶಿಕ್ಷಣವನ್ನು ಹೆಗ್ಗಡದೇವನ ಕೋಟೆ ತಾಲ್ಲೂಕಿನ ಸಂತೆ ಸರಗೂರು ಹಾಗೂ ಕೃಷ್ಣರಾಜಸಾಗರದಲ್ಲಿ ಪಡೆದ ಮುಕ್ತಾರವರು ಮೈಸೂರಿನ ಮಹಾರಾಣಿ ಕಾಲೇಜಿನಿಂದ ಬಿ.ಎ. ಪದವಿ ಮತ್ತು ಸರಕಾರಿ ಕಾಲೇಜಿನಿಂದ ಬಿ.ಎಡ್. ಪದವಿಗಳನ್ನು ಪಡೆದು, ಪ್ರೌಢಶಾಲಾ ಉಪಾಧ್ಯಾಯಿನಿಯಾಗಿ, ಮುಖ್ಯೋಪಾಧ್ಯಾಯಿನಿಯಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾಗಿದ್ದಾರೆ.

ಪ್ರೈಮರಿ ಶಾಲೆಯಲ್ಲಿದ್ದಾಗಲೇ ನೀತಿ ಪಾಠದ ತರಗತಿಯಲ್ಲಿ ಚನ್ನಬಸವಯ್ಯ ಎಂಬ ಮಾಸ್ತರರು ಕಾದಂಬರಿಗಳನ್ನು ತಂದು, ಕಣ್ಣಿಗೆ ಕಟ್ಟುವಂತೆ ರಸವತ್ತಾಗಿ ಮಾಡುತ್ತಿದ್ದ ವರ್ಣನೆಗಳಿಂದ ಪ್ರಭಾವಿತರಾದ ಮುಕ್ತಾ ಅವರಿಗೆ ಸಾಹಿತ್ಯದ ಕಡೆ ಒಲವು ಚಿಗುರತೊಡಗಿತು. ಮಾಸ್ತರರಿಂದ ಪಡೆದು ಮೊದಲು ಓದಿದ ಕಾದಂಬರಿ ತ.ರಾ.ಸು. ಅವರ ಚಂದವಳ್ಳಿಯ ತೋಟ. ಹೈಸ್ಕೂಲಿಗೆ ಬಂದಾಗ ಪ್ರೋತ್ಸಾಹ ನೀಡಿದವರು ಕನ್ನಡ ಪಂಡಿತೆ ನಾಗಲಕ್ಷ್ಮಮ್ಮನವರು. ಮುಂದೆ ರವೀಂದ್ರನಾಥ ಠಾಕೂರ್, ಶರಶ್ಚಂದ್ರರ ಕಾದಂಬರಿಗಳ ಅನುವಾದಗಳನ್ನೆಲ್ಲಾ ಓದಿದರು. ಕಾಲೇಜಿನಲ್ಲಿ ಅಧ್ಯಾಪಕಿಯಾಗಿದ್ದ ಬಿ.ಎಸ್. ರುಕ್ಕಮ್ಮನವರಿಂದ ಪ್ರೇರಿತರಾಗಿ ಚಿತ್ರದುರ್ಗದ ಇತಿಹಾಸದ ಕಾದಂಬರಿಗಳನ್ನು ಓದಿದರು.

ಹೀಗೆ ಓದುತ್ತಾ ಹೋದಂತೆಲ್ಲಾ ಬರೆಯಬೇಕೆಂಬ ತುಡಿತ ಪ್ರಾರಂಭವಾಗುತ್ತಿದ್ದ ದಿನಗಳಲ್ಲಿ, ಅಕ್ಕ ಪದ್ಮಜಾ ಸುಂದರೇಶ್ ಅವರ 'ಅನಿರೀಕ್ಷಿತ' ಕಾದಂಬರಿಯು ಪ್ರಜಾಮತದಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಾಗ, ಮುಕ್ತಾ ಅವರಿಗೂ ಕಾದಂಬರಿ, ಕಥೆಗಳನ್ನು ಏಕೆ ಬರೆಯಬಾರದೆನ್ನಿಸಿ ಬರೆದ ಮೊದಲ ಕಾದಂಬರಿ 'ಆಶ್ರಯ'. ಇದನ್ನು 'ಪ್ರಜಾಮತ' ಪತ್ರಿಕೆಗೆ ಕಳುಹಿಸಿದಾಗ, ಸಂಪಾದಕರಾಗಿದ್ದ ಮ.ನ. ಮೂರ್ತಿಯವರು ಓದಿ, ಪ್ರಶಂಸಿಸಿದರಾದರೂ ಪ್ರಕಟಿಸಲಾಗಲಿಲ್ಲ. ಇದೇ ಸಂದರ್ಭದಲ್ಲಿ ಬರೆದ ಹಲವಾರು ಕಥೆಗಳು ಮಲ್ಲಿಗೆ, ಸುಧಾ ಮುಂತಾದ ವಾರಪತ್ರಿಕೆಗಳಲ್ಲಿ ಪ್ರಕಟವಾಗತೊಡಗಿತು.

ಅನಾವರಣ, ಅಪರಿಚಿತರು, ಅಸ್ವೀಕೃತರು, ಅನುರಾಗ ತಂದ ಅನುಬಂಧ, ಗೆಲುವಿನ ಹೆಜ್ಜೆ, ಕ್ಷಮಯಾಧರಿತ್ರಿ, ಸುಖದ ಸೋಪಾನಗಳು, ದಡ ಸೇರಿದ ನೌಕೆ, ಜೀವನ ಚಕ್ರ, ಅಮೃತಮಯಿ, ಕುಸುಮ ಕಸ್ತೂರಿ, ದಡ ಸೇರಿದ ನೌಕೆ, ದುಂಬಿ ಕೊರೆದ ಹೂವು, ಪ್ರೇಮಾಂಜಲಿ, ವಿಮುಕ್ತಿ, ಪರಿಭ್ರಮಣ, ದೋಣಿ ಸಾಗಲಿ ಮುಂತಾದ 75 ಕ್ಕೂ ಹೆಚ್ಚು ಕಾದಂಬರಿಗಳು, ಹತ್ತಾರು ಕಿರುಕಾದಂಬರಿಗಳು ಪ್ರಕಟಗೊಂಡಿದ್ದು ಇವುಗಳಲ್ಲಿ ಹಲವಾರು ಕಾದಂಬರಿಗಳು ಸುಧಾ, ಗೆಳತಿ, ಮಲ್ಲಿಗೆ, ಸಂಯುಕ್ತ ಕರ್ನಾಟಕ, ಮಂಜುವಾಣಿ, ವನಿತಾ, ಮಂಗಳ, ಕರ್ಮವೀರ ಮುಂತಾದ ನಿಯತಕಾಲಿಕಗಳಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿವೆ.

ಸುಖದಸೋಪಾನ, ಕ್ಷಮಯಾಧರಿತ್ರಿ, ದಡ ಸೇರಿದ ನೌಕೆ, ಜೀವನಚಕ್ರ, ಗೆಲುವಿನ ಹೆಜ್ಜೆ, ಅಮೃತಮಯಿ, ಮೌನರಾಗ, ಮುಂತಾದ ಕಾದಂಬರಿಗಳು ದೂರದರ್ಶನದಲ್ಲಿ ಧಾರಾವಾಹಿಗಳಾಗಿ ಪ್ರಸಾರವಾಗಿದ್ದರೆ ಕಿರುಚಿತ್ರಗಳಾಗಿ ಸೆಳೆತ, ಪಾಲು, ತಾಯಿಕರುಳು ಮುಂತಾದ ಕಥೆಗಳು ಪ್ರಸಿದ್ಧಿ ಪಡೆದಿವೆ. 'ದೋಣಿ ಸಾಗಲಿ' (ನಿರ್ದೇಶನ: ರಾಜೇಂದ್ರಸಿಂಗ್ ಬಾಬು) ಮತ್ತು 'ಮಿಸ್ ಕ್ಯಾಲಿಫೋರ್ನಿಯ' (ನಿರ್ದೇಶನ: ಕೋಡ್ಲು ರಾಮಕೃಷ್ಣ) ಚಲನಚಿತ್ರಗಳಾಗಿವೆ.

ಮುಕ್ತಾ ಅವರ ಸಣ್ಣ ಕಥೆಗಳು ನಾಡಿನ ಪ್ರಖ್ಯಾತ ಪತ್ರಿಕೆಗಳಲ್ಲೆಲ್ಲಾ ಪ್ರಕಟಗೊಂಡಿದ್ದು, ವರ್ತುಲ, ಆವರಣ, ಸುಳಿ, ವೃತ್ತಗಳು, ಆವರ್ತನ, ನಮ್ಮನಮ್ಮೊಳಗೆ, ಮೂರು ಮುಷ್ಠಿಯ ಬದುಕು ಮುಂತಾದ ಕಥಾಸಂಕಲನಗಳಲ್ಲಿ ಸೇರಿವೆ. ಎರಡು ಪ್ರಬಂಧ ಸಂಕಲನಗಳಲ್ಲದೆ ಮಕ್ಕಳಿಗಾಗಿ ಮೂರು ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಇದಲ್ಲದೆ ಹಲವಾರು ಶೈಕ್ಷಣಿಕ ಲೇಖನಗಳನ್ನು ಬರೆದಿದ್ದಾರೆ. ಲೇಖಕಿಯರ ಕಥಾ ಸಂಚಯವನ್ನು ಸಂಪಾದಿಸಿದ್ದಾರೆ.

ಸಾಹಿತ್ಯದ ಎಲ್ಲ ಪ್ರಕಾರಗಳ ಬರವಣಿಗೆಯಲ್ಲಿಯೂ ತೊಡಗಿಸಿ ಕೊಂಡಿದ್ದು ನೂರಾರು ಕೃತಿ ರಚಿಸಿರುವ ಸಿ.ಎನ್. ಮುಕ್ತಾರವರಿಗೆ ಆರ್ಯಭಟ ಪ್ರಶಸ್ತಿ, ಅತಿಮಬ್ಬೆ ಪ್ರಶಸ್ತಿ, ತ್ರಿವೇಣಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಮುಂತಾದ ಹಲವಾರು ಪ್ರಶಸ್ತಿ ಗೌರವಗಳು ಸಂದಿವೆ. ಶಿಕ್ಷಕಿಯಾಗಿ ಸಾಹಿತ್ಯ ಕೃಷಿಮಾಡುವವರಿಗೆ ಸಲ್ಲುವ ಬನಶಂಕರಮ್ಮ ಪ್ರಶಸ್ತಿಯೂ ಸಂದಿದೆ.❑

***(ಕೃಪೆ : ಕನ್ನಡ ಸಂಪದ)***

### ಒಗಟು




ಮರ ಯಾವ ಮರ?  
ಹಣ್ಣಿಲ್ಲದ ಮರ  
ಹೂವಿಲ್ಲದ ಮರ  
ರೆಂಬೆಯಿಲ್ಲದ ಮರ  
ಕೊಂಬೆ ಇಲ್ಲದ ಮರ  
ಕಾಯಿಲ್ಲದ ಮರ  
ಕಸಿವಿಲ್ಲದ ಮರ  
ಬೇರಿಲ್ಲದ ಮರ  
ಬೇರೂರಿರುವ ಮರ  
ನೀವೂ ಕಣ್ಣಿಟ್ಟಿರುವ ಮರ  
ಆ ಮರ ಯಾವ ಮರ?

(ಒಗಟಿನ ಉತ್ತರ–ಕ್ಯಾಮರಾ)

***ಹಿರೇಮಗಳೂರು ಕಣ್ಣನ್***

Delhi Karnataka Sangha Abhimata
July 2026, Vol. No.36, Issue No. 10, Price Rs.1/-
RNI Regn. No. 53405/91, DL-SW-01/4016/22-24
Date of Publication : July 8th / 9th, Posting Date : 10th / 11th, Total Pages-20 Monthly-Language Kannada, POSTED AT RMS DELHI-110006
Printed & Published by Radhakrishna, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Renuka Nidagundi

**ದಿನಾಂಕ 19.07.2026 ರಂದು ಸಂಘದ ವಾರ್ಷಿಕೋತ್ಸವದ ಅಂಗವಾಗಿ ಜರುಗಿದ ಸಾಂಸ್ಕೃತಿಕ ಕಲರವ ಕಾರ್ಯಕ್ರಮದ ದೃಶ್ಯಗಳು**

